# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

## ತುಮಕೂರು

2013-14ನೇ ಸಾಲಿನ
ಲೆಕ್ಕ ತಪಾಸಣಾ ವರದಿ

ಕರ್ನಾಟಕ ಸರ್ಕಾರ

# ರಾಜ್ಯ ಲೆಕ್ಕ ಪತ್ರ ಇಲಾಖೆ

ಸಂಖ್ಯೆ :ಎಲ್.ಎ.ಸಿ/ತು/ಲೆ.ಪ.ವ/ /2014–15/1473–75 ಸಹಾಯಕ ನಿಯಂತ್ರಕರ ಕಛೇರಿ

ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ
ತುಮಕೂರು
ದಿನಾಂಕ : 28–11–2014

ರವರಿಗೆ,
ಆಯುಕ್ತರು
ನಗರಾಭಿವೃದ್ದಿ ಪ್ರಾಧಿಕಾರ
ತುಮಕೂರು

ಮಾನ್ಯರೇ

ವಿಷಯ :– ತುಮಕೂರು ನಗರಾಭಿವೃದ್ದಿ ಪ್ರಾಧಿಕಾರ ಸಂಸ್ಥೆಯ 2013–14ನೇ ಸಾಲಿನ ಲೆಕ್ಕ ತಪಾಸಣಾ ವರದಿಯನ್ನು ಕಳುಹಿಸುವ ಬಗ್ಗೆ,

* * * * * * *

ತುಮಕೂರು ನಗರಾಭಿವೃದ್ದಿ ಪ್ರಾಧಿಕಾರದ 2013–14ನೇ ಸಾಲಿನ ಲೆಕ್ಕ ತನಿಖಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಈ ಲೆಕ್ಕ ತನಿಖಾ ವರದಿಯಲ್ಲಿನ ನ್ಯೂನ್ಯತೆಗಳಿಗೆ ನಿಯಮಾನುಸಾರ ಕ್ರಮವಹಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ತುಮಕೂರು

<u>ವರದಿಯ ಪ್ರತಿಯನ್ನು</u>

1) ಮಾನ್ಯ ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಕಾವೇರಿ ಭವನ, ಬೆಂಗಳೂರು ಇವರಿಗೆ ಸಲ್ಲಿಸಿದೆ.
2) ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಸಲ್ಲಿಸಿದೆ.
3) ಕಛೇರಿ ಪ್ರತಿ.

ಸಹಿ/–
ಸಹಾಯಕ ನಿಯಂತ್ರಕರು
ಸ್ಥಳ ಲೆಕ್ಕ ಪರಿಶೋಧನ ವರ್ತುಲ
ತುಮಕೂರು

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14 ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಕಂಡು ಬಂದಿರುವ ಆಕ್ಷೇಪಣೆ ಮತ್ತು ವಸೂಲಾತಿಗಳ ವಿವರ

| ಕ್ರ.ಸಂ | ಭಾಗದ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನ್ಯತೆಗಳ ವಿವರ | ಆಕ್ಷೇಪಣೆ ಮೊತ್ತ (ರೂ ಗಳಲ್ಲಿ) | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | 5 | 23 | ಹೆಚ್ಚಿನ ಪರಿಮಾಣಕ್ಕೆ ಟೆಂಡರ್ ದರ ನೀಡಿರುವುದು. | – | 3212 |
| | | | **ಒಟ್ಟು ಮೊತ್ತ** | – | **3212** |

ಸಹಿ/–
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ತುಮಕೂರು

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14ನೇ ಸಾಲಿನ ಲೆಕ್ಕ ತನಿಖಾ ವರದಿಯ ವಿವರ.

**ಪೀಠಿಕೆ**

ಈ ಸಂಸ್ಥೆಯ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ ಸೆಕ್ಷನ್ 48 ರ ಅನ್ವಯದಂತೆ ಕೈಗೊಳ್ಳಲಾಗಿರುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರದ ಜಮಾ ಖರ್ಚುಗಳ ವಿವರಗಳು ಮತ್ತು ಲೆಕ್ಕ ಪತ್ರಗಳ ನಿರ್ವಹಣೆಯ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. ಈ ಬಗ್ಗೆ ಸಂಸ್ಥೆಯ ಅಧಿಕಾರಿಗಳು ಮತ್ತು ಆಡಳಿತ ಮಂಡಳಿ ವರ್ಗದವರು ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿಯನ್ನು ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸಲು ಸೂಚಿಸಿದೆ.

# ಭಾಗ – 1

**1) ಲೆಕ್ಕ ತನಿಖೆಯ ವಿವರ :**

ಎ) ಲೆಕ್ಕ ತನಿಖಾ ತಂಡದ ವಿವರ

1) ಶ್ರೀ ನರಸಿಂಹಮೂರ್ತಿ, ಲೆಕ್ಕ ಪರಿಶೋಧನಾ ಅಧಿಕಾರಿಗಳು,
2) ಶ್ರೀ ಹೆಚ್.ಕೃಷ್ಣಪ್ಪ, ಲೆಕ್ಕ ಪರಿಶೋಧಕರು,
3) ಶ್ರೀ ದಯಾನಂದ, ಲೆಕ್ಕ ಪರಿಶೋಧಕರು,
4) ಶ್ರೀಮತಿ ಭಾರತಿ ಚಂದ್ರಮತಿ, ಲೆಕ್ಕ ಪರಿಶೋಧಕರು,
5) ಶ್ರೀ ಮರುಳಸಿದ್ದಪ್ಪ, ಲೆಕ್ಕ ಪರಿಶೋಧಕರು,
6) ಶ್ರೀ ಸಿ.ಕೆ ವೆಂಕಟೇಶ, ಲೆಕ್ಕ ಪರಿಶೋಧಕರು,

| | | |
|---|---|---|
| ಬಿ) ಲೆಕ್ಕ ತನಿಖೆ ಅವಧಿ | : | 2013–14 |
| ಸಿ) ಲೆಕ್ಕ ತನಿಖೆ ಪ್ರಾರಂಭಿಕ ದಿನಾಂಕ | : | 05–08–2014 |
| ಡಿ) ಲೆಕ್ಕ ತನಿಖಾ ಮುಕ್ತಾಯದ ದಿನಾಂಕ | : | 13–08–2014 |
| ಇ) ಲೆಕ್ಕ ತನಿಖೆ ತೆಗೆದುಕೊಂಡ ಒಟ್ಟು ಮಾನವ ದಿನಗಳು | : | 42 ಮಾನವ ದಿನಗಳು |

ಎಫ್) ಲೆಕ್ಕಾ ತನಿಖಾ ವರದಿಯ ಪುನರ್ ಪರಿಶೀಲನಾ ದಿನಾಂಕ : 16–10–2014

ಜಿ) ಲೆಕ್ಕಾ ತನಿಖಾ ವರದಿಯ ಪುನರ್ ಪರಿಶೀಲನಾ
ಅಧಿಕಾರಿಯ ಹೆಸರು : ಶ್ರೀ ಕೆ. ಕರಿಯಾನಾಯಕ್,
ಮತ್ತು ಪದನಾಮ ಸಹಾಯಕ ನಿಯಂತ್ರಕರು

2) ಸಂಸ್ಥೆಯ ಆಡಳಿತ ವರ್ಗದ ವಿವರ :–

| | | |
|---|---|---|
| 1) ಅಧ್ಯಕ್ಷರು | : | ಜಿಲ್ಲಾಧಿಕಾರಿಗಳು |
| 2) ಆಯುಕ್ತರು | : | ಶ್ರೀ ಬಿ.ಟಿ ರಂಗಸ್ವಾಮಿ, ಕೆ.ಎಂ.ಎ.ಎಸ್., |
| 3) ಸಹಾಯಕ ಕಾರ್ಯಪಾಲಕ ಅಭಿಯಂತರರು | : | ಶ್ರೀ ಎಸ್.ನಾಗರಾಜ |

# ಭಾಗ – 2

**3) <u>ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳ ಬಗ್ಗೆ:</u>**

ಈ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಿಗೆ ಸಂಬಂಧಿಸಿದಂತೆ, ಪೂರ್ಣ ಪ್ರಮಾಣದಲ್ಲಿ ಕಂಡಿಕೆವಾರು ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. ಹಿಂದಿನ ಸಾಲುಗಳ ಲೆಕ್ಕ ತಪಾಸಣಾ ವರದಿಯಲ್ಲಿ ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು ಅನುಬಂಧ – 01 ರಲ್ಲಿ ನೀಡಿದೆ. ಕಂಡಿಕೆಗಳ ಬಾಕಿ ವಿವರ ಈ ಕೆಳಕಂಡಂತಿದೆ.

| ವಿವರ | ಕಂಡಿಕೆ ಸಂಖ್ಯೆಗಳು | ವಸೂಲಾತಿ ಮೊತ್ತ | ಕಂಡಿಕೆ ಸಂಖ್ಯೆಗಳು | ಆಕ್ಷೇಪಣಾ ಮೊತ್ತ |
|---|---|---|---|---|
| ದಿನಾಂಕ 1–4–2013 ಕ್ಕೆ ಪ್ರಾರಂಭಿಕ ಶಿಲ್ಕು | 53 | 15720643 | 104 | 1924188 |
| 2013–14ಕ್ಕೆ ಸೇರ್ಪಡೆ | - | - | 1 | 3212 |
| ಒಟ್ಟು | 53 | 15720643 | 105 | 1927400 |
| 2013–14ಕ್ಕೆ ತೀರುವಳಿ | - | - | - | - |
| **31–03–2014ಕ್ಕೆ ಅಂತಿಮ ಶಿಲ್ಕು** | 53 | 15720643 | 105 | 1927400 |

# ಭಾಗ – 3

**4) ಆರ್ಥಿಕ ಪರಿಸ್ಥಿತಿಯ ಬಗ್ಗೆ :**

2013–14ನೇ ಸಾಲಿಗೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಪ್ರಾಧಿಕಾರದ ವಿವಿಧ ಬ್ಯಾಂಕ್‌ಗಳ ಕ್ರೋಢೀಕೃತ ಆರ್ಥಿಕ ಪರಿಸ್ಥಿತಿ ಈ ಕೆಳಗಿನಂತಿರುತ್ತದೆ.

| | |
|---|---|
| 1–4–2013ಕ್ಕೆ ಪ್ರಾರಂಭಿಕ ಶಿಲ್ಕು : | ರೂ. 8,58,21,669 |
| 2013–14ಕ್ಕೆ ಜಮಾ : | ರೂ. 23,12,91,213 |
| **ಒಟ್ಟು ರೂ. :** | 31,71,12,882 |
| 2013–14 ನೇ ಸಾಲಿನ ಖರ್ಚು : | ರೂ. 29,83,75,305 |
| 31–3–2014 ಕ್ಕೆ ಅಂತಿಮ ಶಿಲ್ಕು : | ರೂ .1,87,37,577 |
| **ಬ್ಯಾಂಕ್‌ಗಳ ಪಾಸ್ ಪುಸ್ತಕಗಳ ಪ್ರಕಾರ ಅಂತಿಮ ಶಿಲ್ಕು** | ರೂ. 19421580 |
| **ನಗದು ಪುಸ್ತಕಗಳ ಪ್ರಕಾರ ಅಂತಿಮ ಶಿಲ್ಕು** | ರೂ. 18737577 |
| **ವ್ಯತ್ಯಾಸ** | ರೂ. 6,84,003 |

ನಗದೀಕರಣವಾಗಿಲ್ಲದಿರುವ ಚೆಕ್‌ಗಳ ವಿವರವನ್ನು ಅನುಬಂಧ–2 ರಲ್ಲಿ ನೀಡಿದೆ.

**5) ಅಮಾನಿಕೆರೆ ಅಭಿವೃದ್ಧಿ ನಿಧಿಯ ಆರ್ಥಿಕ ಪರಿಸ್ಥಿತಿ.**

2013–14ನೇ ಸಾಲಿನಲ್ಲಿ ಅಮಾನಿಕೆರೆಯ ಆರ್ಥಿಕ ವಹಿವಾಟನ್ನು ಖಾತೆ ಸಂಖ್ಯೆ 64041475776 ಹಾಗೂ ಖಾತೆ ಸಂಖ್ಯೆ 64040379072 ರಲ್ಲಿ ವ್ಯವಹರಿಸಿದ್ದು, ಆರ್ಥಿಕ ಪರಿಸ್ಥಿತಿ ಈ ಕೆಳಗಿನಂತಿರುತ್ತದೆ.

| ವಿವರ | ಖಾತೆ 64041475776 | ಖಾತೆ 64040379072 | ಒಟ್ಟು |
|---|---|---|---|
| 1–4–2013ಕ್ಕೆ ಪ್ರಾರಂಭಿಕ ಶಿಲ್ಕು<br>2013–14ಕ್ಕೆ ಜಮಾ | 23703292<br>453685 | 12176107<br>491915 | 35879399<br>945600 |
| ಒಟ್ಟು<br>2013–14ಕ್ಕೆ ಖರ್ಚು | 24156977<br>23462851 | 12668022<br>- | 36824999<br>23462851 |
| 31–3–2014ಕ್ಕೆ ಅಂತಿಮ ಶಿಲ್ಕು | 694126 | 12668022 | 13362148 |
| ಬ್ಯಾಂಕ್ ಪ್ರಕಾರ | 846775 | 12668022 | 13514797 |
| ವ್ಯತ್ಯಾಸ | 152649 | - | 152649 |

ನಗದೀಕರಣವಾಗಿಲ್ಲದಿರುವ ಚೆಕ್‌ಗಳ ವಿವರ.

| ಚೆಕ್ ನಂಬರ್ | ದಿನಾಂಕ | ಮೊತ್ತ |
|---|---|---|
| 828238 | 29-6-2011 | 109063 |
| 852010 | 01-03-2014 | 24534 |
| 852016 | 18-03-2014 | 15093 |
| 852017 | 18-03-2014 | 3735 |
| 852018 | 18-03-2014 | 377 |
| | Total | 152802 |

**ವ್ಯತ್ಯಾಸದ ಮೊತ್ತ ರೂ. 152802**
**152649**

**ವ್ಯತ್ಯಾಸದ ಮೊತ್ತ ರೂ. 153/–ಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.**

**6) ಅಮಾನಿಕೆರೆಯ ಜಮಾ ಮತ್ತು ಖರ್ಚಿನ ವಿವರ.**

2013–14ನೇ ಸಾಲಿಗೆ ಸಂಬಂಧಿಸಿದಂತೆ ಅಮಾನಿಕೆರೆ ಅಭಿವೃದ್ದಿಯ ಜಮಾ ಖರ್ಚಿನ ವರ್ಗೀಕೃತ ವಿವರ ಈ ಕೆಳಗಿನಂತಿರುತ್ತದೆ.

| **ಜಮಾ ವಿವರ** | **ಮೊತ್ತ** | **ಖರ್ಚಿನ ವಿವರ** | **ಮೊತ್ತ** |
|---|---|---|---|
| ಬ್ಯಾಂಕ್ ಬಡ್ಡಿ | 945600 | ಠೇವಣಿ | 22500000 |
| | | ಕೆರೆ ಅಭಿವೃದ್ಧಿ | 891809 |
| | | ರಾಜಧನ | 8234 |
| | | ಮಾರಾಟ ಕರ | 39627 |
| | | ಆದಾಯ ಕರ | 12384 |
| | | ಕಾರ್ಮಿಕರ ಕಲ್ಯಾಣ ನಿಧಿ | 9807 |
| | | ಗುತ್ತಿಗೆದಾರರ ಕ್ಷೇಮ ನಿಧಿ | 990 |
| **ಒಟ್ಟು** | **945600** | **ಒಟ್ಟು** | **23462851** |
| **ಪ್ರಾರಂಭಿಕ ಶಿಲ್ಕು** | **35879399** | **ಅಂತಿಮ ಶಿಲ್ಕು** | **13362148** |
| **ನಿವ್ವಳ ಮೊತ್ತ** | **36824999** | **ನಿವ್ವಳ ಮೊತ್ತ** | **36824999** |

7) ಆಯ–ವ್ಯಯದ ಬಗ್ಗೆ.

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14ನೇ ಸಾಲಿನ ಆಯ ವ್ಯಯ ಪಟ್ಟಿಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ನಿರ್ಣಯದ ಸಂಖ್ಯೆ :ಟಿಯುಡಿಎ/ಆಯವ್ಯಯ/ಸಭೆ01/2013–14, ದಿನಾಂಕ 18–03–2013ರಲ್ಲಿ ಅಂಗೀಕೃತವಾಗಿರುತ್ತದೆ.

ಇದರನ್ವಯ ಪ್ರಾಧಿಕಾರದ 2013–14ನೇ ಸಾಲಿನ ಆದಾಯ ವೆಚ್ಚದ ವಿವರಗಳು ಈ ಮುಂದಿನಂತಿರುತ್ತದೆ.

| ಕ್ರ.ಸಂ | ವಿವರ | ಆದಾಯ | ವೆಚ್ಚ |
|---|---|---|---|
| 1. | ನಿರೀಕ್ಷಿತ | 968403000 | 968311000 |
| 2. | ವಾಸ್ತಾವಿಕ | 317112882 | 298375305 |

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು 2013–14ನೇ ಸಾಲಿನ ಆಯ ವ್ಯಯದಲ್ಲಿ ಒಟ್ಟಾರೆ ರೂ. 9684.03 ಲಕ್ಷಗಳನ್ನು ಆದಾಯ ಮತ್ತು ಸಾಲ ವಿಭಾಗದಿಂದ ನಿರೀಕ್ಷಿಸಿದ್ದು, ರೂ. 9683.11 ಲಕ್ಷಗಳ ವೆಚ್ಚಕ್ಕೆ ಅವಕಾಶ ಕಲ್ಪಿಸಿರುತ್ತದೆ.

8) ಹೂಡಿಕೆಗಳ ಬಗ್ಗೆ :

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿವಿಧ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲಾಗಿರುವ ಹೂಡಿಕೆಗಳ ವಿವರಗಳನ್ನು ಅನುಬಂಧ –3 ರಲ್ಲಿ ತೋರಿಸಲಾಗಿರುತ್ತದೆ ಮತ್ತು ವರದಿಗೆ ಲಗತ್ತಿಸಲಾಗಿದೆ.

ಹೂಡಿಕೆಗಳ ವ್ಯವಹಾರದ ಘೋಷ್ವಾರೆ ವಿವರವನ್ನು ಈ ಕೆಳಗೆ ನಮೂದಿಸಿದೆ.

| | |
|---|---|
| ದಿನಾಂಕ 01–04–2013ಕ್ಕೆ ಪ್ರಾರಂಭಿಕ ಶಿಲ್ಕು | 40,48,04,908 |
| 2013–14 ನೇ ಸಾಲಿಗೆ ತೊಡಗಿಸಿರುವುದು ಮತ್ತು ನವೀಕರಣ | 4,30,65,581 |
| ಒಟ್ಟು ಹೂಡಿಕೆ | 44,78,70,489 |
| 2013–14ನೇ ಸಾಲಿಗೆ ಹೂಡಿಕೆ ಹಿಂಪಡೆದು ಪ್ರಾಧಿಕಾರಕ್ಕೆ ಜಮಾ | = 88,09,699 |
| ದಿನಾಂಕ 31–03–2014ಕ್ಕೆ ಉಳಿದ ನಿವ್ವಳ ಹೂಡಿಕೆಗಳು | 45,66,80,188 |

**ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಿರುವ ಹೂಡಿಕೆಗಳ ಠೇವಣಾತಿಗಳನ್ನು ಅನುಬಂಧ –4ರಲ್ಲಿ ಈ ವರದಿಯೊಂದಿಗೆ ಲಗತ್ತಿಸಿದೆ.**

**9) ಸಾಲಗಳ ಬಗ್ಗೆ.**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2013–14ನೇ ಸಾಲಿಗೆ ಸಂಬಂಧಿಸಿದಂತೆ ಸಾಲಗಳ ಸ್ವೀಕೃತಿ–ಪಾವತಿ ವಿವರಗಳನ್ನು ಸ್ಪಷ್ಟ ಮತ್ತು ವಿವರಗಳೊಂದಿಗೆ ಪರಿಪೂರ್ಣವಾಗಿ ನಿರ್ವಹಿಸಿರುವುದಿಲ್ಲ. ಲೆಕ್ಕ ತನಿಖೆಗೆ ಹಾಜರುಪಡಿಸಲಾದ ದಾಖಲೆ / ವಿವರಗಳನ್ನು ಪರಿಶೀಲಿಸಲಾಗಿ, ಸಾಲಗಳ ವ್ಯವಹಾರದ ವಿವರ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| | | |
|---|---|---|
| ದಿನಾಂಕ 01–04–2013ಕ್ಕೆ ಬಾಕಿ ಇದ್ದಂತಹ ಸಾಲ ಮತ್ತು ಬಡ್ಡಿ ಮೊತ್ತ | = | 2447.73 ಲಕ್ಷ |
| 2013–14ನೇ ಸಾಲಿನಲ್ಲಿ ಹಿಂದಿರುಗಿಸಿದ ಮತ್ತು ಹೊಂದಾಣಿಕೆ ಮಾಡಿದ ಸಾಲದ ಮೊತ್ತ | = | 1137.58 ಲಕ್ಷ |
| ಒಟ್ಟು ಉಳಿದ ಸಾಲ | = | 1310.15 |
| 2013–14ನೇ ಸಾಲಿನಲ್ಲಿಯ ಕೆಯುಐಡಿಎಫ್‌ಸಿಗೆ ಪಾವತಿಸಲು ನಿಗಧಿಪಡಿಸಿದಂತೆ ಅಸಲು + ಬಡ್ಡಿ | = | 282.06 |

**ದಿನಾಂಕ 31–03–2014ಕ್ಕೆ ಪಾವತಿಸಬೇಕಾದ ಉಳಿಕೆ ಸಾಲದ ಮೊತ್ತ ರೂ. 1592.21**

ಮೇಲಿನಂತೆ ಸಾಲಗಳ ವ್ಯವಹಾರವಿದ್ದು, ಸದರಿ ವ್ಯವಹಾರದ ಬಗ್ಗೆ ಸ್ಪಷ್ಟ / ನಿರ್ಧಿಷ್ಟ ದಾಖಲೆಗಳನ್ನು ನಿರ್ವಹಿಸುವುದು. ಸಾಲಗಳ ವಹಿಯನ್ನು ನೀಡಿಕೆವಾರು ವಿವರವಾಗಿ ನಿರ್ವಹಿಸುವಂತೆ ಸೂಚಿಸಿದೆ. ಸಾಲ ಪಡೆದು ಹಿಂಪಾವತಿಸಿದ ಮತ್ತು ಬಾಕಿ ಇರುವ ಕುರಿತು ಲೆಕ್ಕ ಸಮನ್ವಯ ಕೈಗೊಂಡು ಸ್ಪಷ್ಟ ಮತ್ತು ನಿಖರವಾಗಿ ನಿರ್ವಹಿಸುವುದು.

**10) ಮುಂಗಡಗಳ ವ್ಯವಹಾರದ ಬಗ್ಗೆ :**

ಈ ಪ್ರಾಧಿಕಾರದ ವತಿಯಿಂದ ಈ ಕೆಳಗೆ ವಿವರಿಸಿದಂತೆ ಕಾಮಗಾರಿ ಕೈಗೊಳ್ಳುವ ಪ್ರಯುಕ್ತ ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ಮುಂಗಡವಾಗಿ ಪಾವತಿಸಲಾಗಿರುತ್ತದೆ

| ಕ್ರ. ಸಂ | ಕಾಮಗಾರಿಯ ಹೆಸರು | ಚೆಕ್ ವಿವರ | ಮುಂಗಡ ಪಾವತಿ ಮೊತ್ತ | ಹೊಂದಾಣಿಕೆ ಮೊತ್ತ | ಉಳಿಕೆ ಮೊತ್ತ |
|---|---|---|---|---|---|
| 1. | ತುಮಕೂರು ಅಮಾನಿಕೆರೆ ಉದ್ಯಾನವನದ ಭಾಗದಲ್ಲಿ ಮುಖ್ಯ ಪ್ರವೇಶ ದ್ವಾರದ ನಿರ್ಮಾಣ. | 793598 21-03-2012<br>336394 3-10-2012 | 10,00,000<br>12,00,000 | –<br>– | 10,00,000<br>12,00,000 |
| 2. | ತುಮಕೂರು ಅಮಾನಿಕೆರೆಯ ಕೋತಿತೋಪು ಉದ್ಯಾನವನದ ಅಭಿವೃದ್ಧಿ ಕಾಮಗಾರಿ. | 454066 21-05-2012 | 35,00,000 | – | 35,00,000 |
| 3. | ತುಮಕೂರು ಅಮಾನಿಕೆರೆ ಉದ್ಯಾನವನದ ಗಜೀಬೋ, ಸೆಂಟ್ರಲ್ ಪ್ಲಾಜಾ, ಪಾತ್‌ವೇ, ಫುಡ್‌ಕೋರ್ಟ್, ಟಾಯ್ಲೆಟ್ ಬ್ಲಾಕ್ ನಿರ್ಮಾಣ. | 785540 02-03-2013 | 40,00,000 | – | 40,00,000 |
| | **ಒಟ್ಟು ಮೊತ್ತ** | | **97,00,000** | | **97,00,000** |

ಮೇಲಿನಂತೆ ಮುಂಗಡವಾಗಿ ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ಪಾವತಿಸಿದೆ. ಈ ಮೊತ್ತವು ಈವರೆವಿಗೂ ಹೊಂದಾಣಿಕೆ / ಹಿಂಪಾವತಿಯಾಗದಿರುವುದು ಕಂಡು ಬಂದಿರುತ್ತದೆ. ವೆಚ್ಚ / ಪ್ರಗತಿ ವಿವರವನ್ನು ಸಹ ಒದಗಿಸಿರುವುದಿಲ್ಲ.

ಈ ವಿವರಗಳನ್ನು ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ 03, ದಿನಾಂಕ 11-08-2014ರಂದು ವಿಚಾರಣಾ ಪತ್ರ ನೀಡಲಾಗಿರುತ್ತದೆ. ಆದರೂ ಈ ಕುರಿತು ಸ್ಪಷ್ಟ ವಿವರಗಳನ್ನು ತನಿಖೆಗೆ ಹಾಜರು ಪಡಿಸಿರುವುದಿಲ್ಲ.

ಮುಂಗಡ ರೂಪದಲ್ಲಿ ನಿರ್ಮಿತಿ ಕೇಂದ್ರಕ್ಕೆ ನೀಡಲಾದ ಬಗ್ಗೆ ಈ ಕೆಳಕಂಡ ವಿವರಣೆ /ಮಾಹಿತಿಗಳನ್ನು ತನಿಖೆಗೆ ಹಾಜರುಪಡಿಸುವುದು.

1) ಸದರಿ ನಿರ್ಮಿತಿ ಕೇಂದ್ರ, ತುಮಕೂರು ಇವರಿಗೆ ಹಾಗೂ ಸದರಿ ಕಾಮಗಾರಿಗಳ ನಿರ್ಮಾಣಕ್ಕೆ ಮುಂಗಡವಾಗಿ ಟೆಂಡರ್ ಮುಂತಾದ ಪ್ರಕ್ರಿಯೆಗಳಿಲ್ಲದೇ ನೇರವಾಗಿ ಪಾವತಿಸಲಾದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಸ್ಪಷ್ಟ ಆದೇಶ, ಮಂಜೂರಾತಿ ವಿವರಣೆ.

2) ಮುಂಗಡ ಪಾವತಿ ಬಗ್ಗೆ ಮಾಡಿಕೊಂಡ ನಿಬಂಧನೆ ಮತ್ತು ಷರತ್ತುಗಳ ಒಡಂಬಡಿಕೆ ವಿವರಗಳು.
3) ವಿಳಂಬ ಪ್ರಗತಿಗೆ ಕೈಗೊಂಡ ಕ್ರಮದ ವಿವರಗಳು.
4) ಕಾಮಗಾರಿಯ ಪ್ರಗತಿ ಉಪಯುಕ್ತತಾ ಪ್ರಮಾಣ ಪತ್ರ.
5) ಭೌತಿಕ / ಆರ್ಥಿಕ ಪ್ರಗತಿಯ ವಿವರಗಳು.

ಮೇಲಿನಂತೆ ಸದರಿ ದಾಖಲಾತಿಗಳನ್ನು ತನಿಖೆಗೆ ಒದಗಿಸುವಂತೆ ಸೂಚಿಸಿದೆ.

**ಮುಂಗಡಗಳ ವ್ಯವಹಾರದ ಘೋಷ್ವಾರೆ**

| | | |
|---|---|---|
| ಪ್ರಾರಂಭಿಕ ಶಿಲ್ಕು ರೂ. | : | **9700000** |
| 2013–14ನೇ ಸಾಲಿನಲ್ಲಿ ಪಾವತಿಸಲಾಗಿರುವ ಮುಂಗಡ | : | 6329000 |
| ಒಟ್ಟು | : | **16029000** |
| 2013–14 ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಮುಂಗಡ | : | 12230000 |
| 31–03–2014 ರ ಅಂತ್ಯಕ್ಕೆ ಬಾಕಿ ಉಳಿದಿರುವ ಮುಂಗಡ ಮೇಲ್ಕಂಡ ಉಳಿಕೆ ಮುಂಗಡದ ಬಾಬ್ತು. | : | 3799000 |

**11) ವ್ಯವಹಾರ ಸ್ಥಗಿತವಾದ ಬ್ಯಾಂಕ್ ಲೆಕ್ಕ ಖಾತೆಗಳನ್ನು ಮುಕ್ತಾಯಗೊಳಿಸುವ ಕುರಿತು :**

2013–14ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಬ್ಯಾಂಕ್ ಖಾತೆಗಳ ವ್ಯವಹಾರ ವಿವರಗಳನ್ನು ಪರಿಶೀಲಿಸಲಾಗಿ ಈ ಪ್ರಾಧಿಕಾರದಲ್ಲಿ ಸುಮಾರು 22 ಕ್ಕಿಂತಲೂ ಹೆಚ್ಚು ಬ್ಯಾಂಕ್ ಲೆಕ್ಕ ಖಾತೆಗಳನ್ನು ನಿರ್ವಹಿಸಿರುವುದು ಹಾಗೂ ಇವುಗಳಲ್ಲಿ 12ಕ್ಕಿಂತಲೂ ಹೆಚ್ಚು ಬ್ಯಾಂಕ್ ಲೆಕ್ಕ ಖಾತೆಗಳಲ್ಲಿ ಯಾವುದೇ ವ್ಯವಹಾರ ನಡೆಸದೆ ಸ್ಥಗಿತವಾಗಿರುವುದು ಕಂಡು ಬಂದಿರುತ್ತದೆ. ಈ ಕುರಿತಂತೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ 09, ದಿನಾಂಕ 13–08–2014ರಲ್ಲಿ ವಿವರಣೆ ಮತ್ತು ಸೂಕ್ತ ಕ್ರಮವಹಿಸಲು ಕೋರಲಾಗಿರುತ್ತದೆ.

ಲೆಕ್ಕ ಪತ್ರಗಳನ್ನು ಸಮರ್ಪಕವಾಗಿ ಖಚಿತ, ಸ್ಪಷ್ಟ ಮತ್ತು ಸರಳ ನಿರ್ವಹಣೆಯ ಸದುದ್ದೇಶದಿಂದ ಲೆಕ್ಕ ಸಮನ್ವಯ ಲೆಕ್ಕ ಪತ್ರಗಳ ನಿಖರ ನಿರ್ವಹಣೆಯ ಹಿತದೃಷ್ಟಿಯಿಂದ ಯಾವುದೇ ವ್ಯವಹಾರ ನಡೆಸದೆ ಸ್ಥಗಿತಗೊಂಡಿರುವ ಬ್ಯಾಂಕ್ ಲೆಕ್ಕ ಖಾತೆಗಳನ್ನು ಮುಕ್ತಾಯಗೊಳಿಸುವುದು ಅತ್ಯವಶ್ಯಕವಿರುತ್ತದೆ.

ಆದ್ದರಿಂದ ಸರಳತೆ ಮತ್ತು ಸ್ಪಷ್ಟ ನಿರ್ವಹಣೆ ಅನುಕೂಲವಾಗುವಂತೆ ಬ್ಯಾಂಕ್ ಲೆಕ್ಕ ಖಾತೆಗಳನ್ನು ಸೀಮಿತಗೊಳಿಸಿ, ಸ್ಥಗಿತಗೊಂಡ (ಇನ್ ಆಪರೇಟಿವ್ ಅಕೌಂಟ್ಸ್) ಬ್ಯಾಂಕ್ ಲೆಕ್ಕ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮವಹಿಸುವುದು.

**12) ಜಮಾ ಖರ್ಚಿನ ತ:ಖ್ತೆಯ ಬಗ್ಗೆ :**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14ನೇ ಸಾಲಿನ ಜಮಾ ಖರ್ಚಿನ ವರ್ಗೀಕೃತ ವಿವರವನ್ನು ಅನುಬಂಧ 5 ರಲ್ಲಿ ನೀಡಿದೆ.

**13) ಆಸ್ತಿ ಮತ್ತು ಹೊಣೆಗಾರಿಕೆಗಳು :**

ನಗರಾಭಿವೃದ್ಧಿ ಪ್ರಾಧಿಕಾರದ 2013–14ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರ ಕೆಳಗಿನಂತಿರುತ್ತದೆ.

| ಕ್ರ.ಸಂ. | ಆಸ್ತಿ ವಿವರಗಳು | ಮೊತ್ತ | ಹೊಣೆಗಾರಿಕೆಗಳ ವಿವರಗಳು | ಮೊತ್ತ |
|---|---|---|---|---|
| 1 | **ಹೂಡಿಕೆಗಳು** | 456680188 | ಸಾಲಗಳು | 199510000 |
| 2 | **ಮುಂಗಡಗಳು** | 3799000 | ಲೆಕ್ಕ ತನಿಖಾ ಶಿಲ್ಕು | 2210814 |
| 3 | **ಅಂತಿಮ ಶಿಲ್ಕು** | 18737577 | ಹೊಣೆಗಾರಿಕೆಗಿಂತ ಆಸ್ತಿ ಹೆಚ್ಚಿಗೆ ಇರುವುದು | 277495951 |
| | **ಒಟ್ಟು** | **479216765** | | **479216765** |

**14) ರಶೀದಿ ದಾಸ್ತಾನು ವಿವರ.**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14 ನೇ ಸಾಲಿನ ರಶೀದಿ ಪುಸ್ತಕಗಳ ದಾಸ್ತಾನು ವಿವರ ಕೆಳಕಂಡಂತೆ ಇರುತ್ತದೆ.

| | |
|---|---|
| ದಿನಾಂಕ 01–04–2013 ಕ್ಕೆ ಪ್ರಾರಂಭಿಕ ಶಿಲ್ಕು | 39 |
| 2013–14ಕ್ಕೆ ಸ್ವೀಕೃತಿ | 100 |
| ಒಟ್ಟು | **139** |
| **2013–14 ರಲ್ಲಿ ಉಪಯೋಗ** | **81** |
| **31–03–2014 ಕ್ಕೆ ಅಂತಿಮ ಶಿಲ್ಕು** | **58** |

ರಶೀದಿ ಪುಸ್ತಕಗಳ ಸಂಖ್ಯೆ 542, 2013–14 ನೇ ಸಾಲಿನಲ್ಲಿ ಭಾಗಶ: ಬಳಕೆಯಾಗಿದ್ದು, 2014–15ನೇ ಸಾಲಿನಲ್ಲಿ ಮುಂದುವರೆದಿರುತ್ತದೆ.

ರಶೀದಿ ಪುಸ್ತಕ ಸಂಖ್ಯೆ 543 ರಿಂದ 568 ರವರೆಗೆ ಒಟ್ಟು 26 ಪುಸ್ತಕಗಳು 2014-15 ನೇ ಸಾಲಿನಲ್ಲಿ ಬಳಕೆಯಾಗಿರುತ್ತವೆ.

ರಶೀದಿ ಪುಸ್ತಕ ಸಂಖ್ಯೆ 569 ರಿಂದ 600 ರವರೆಗೆ ಒಟ್ಟು 32 ಪುಸ್ತಕಗಳು ಖಾಲಿ ಉಳಿದಿರುತ್ತವೆ. ಮೇಲ್ಕಂಡ ರಸೀದಿ ಪುಸ್ತಕಗಳ ದಾಸ್ತಾನು ಭೌತಿಕವಾಗಿ ಪರಿಶೀಲಿಸಿದಾಗ ತಾಳೆ ಹೊಂದಿರುತ್ತದೆ.

## ಭಾಗ – 4

1) ಕೆ.ಸಿ.ಎಸ್.ಆರ್ ನಿಯಮ 118(iii) ರ ಪ್ರಕಾರ ನೌಕರರಿಗೆ ಸಂಬಂಧಿಸಿದ ವರ್ಷಗಳ ರಜೆ ನಗದೀಕರಣ ಸೌಲಭ್ಯ ಪಾವತಿಸುವ ಒಂದು ತಿಂಗಳ ಮೊದಲು ನಿಗಧಿತ ರಜೆ ಪ್ರಪತ್ರಗಳನ್ನು ಪಡೆಯಬೇಕಾಗಿದ್ದು, ನಿಮ್ಮ ಕಛೇರಿಯ ನೌಕರರಿಗೆ 2013 ಮತ್ತು 2014ನೇ ಸಾಲಿನ ರಜೆ ನಗದೀಕರಣ ಅರ್ಜಿ ನೀಡಿದ ಮಾಹೆಯಲ್ಲಿಯೇ ನಗದೀಕರಣ ಸೌಲಭ್ಯ ನೀಡಿರುವುದು ಆಕ್ಷೇಪಾರ್ಹವಾಗಿರುತ್ತದೆ. (ವೇತನ ವಹಿ ಪುಸ ಸಂಖ್ಯೆ 39 ಮತ್ತು 63)

2) ವೇತನ ಅಥವಾ ವ್ಯತ್ಯಾಸಗಳನ್ನು ಪಾವತಿಸುವಾಗ ವೇತನ ವಹಿಯಲ್ಲಿ ಸಂಬಂಧಿಸಿದ ನೌಕರರ ಸಹಿ ತೆಗೆದುಕೊಂಡಿರುವುದಿಲ್ಲ. ವೇತನ ಮೊತ್ತವನ್ನು ನೇರವಾಗಿ ಸಂಬಂಧಿಸಿದ ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದರೆ ನೌಕರರ ಬ್ಯಾಂಕ್ ಖಾತೆ ಸಂಖ್ಯೆಗಳನ್ನೊಳಗೊಂಡ ಬ್ಯಾಂಕ್ ಸ್ವೀಕೃತಿ ಪತ್ರವನ್ನು ವೇತನ ವಹಿಗಳಲ್ಲಿ ಲಗತ್ತಿಸಲು ಸೂಚಿಸಿದೆ ಮತ್ತು ಸಂಬಂಧಿಸಿದ ಚೆಕ್ ಸಂಖ್ಯೆ ಮತ್ತು ದಿನಾಂಕಗಳನ್ನು ಆಯುಕ್ತರು ದೃಡೀಕರಿಸಿರುವುದಿಲ್ಲ. ಕ್ರಮಕೈಗೊಳ್ಳಲು ಸೂಚಿಸಿದೆ. (ವೇತನ ವಹಿ ಪುಟ ಸಂಖ್ಯೆ 65, 77, 75, 78)

### ಸೇವಾವಹಿಗಳ ಬಗ್ಗೆ

3) ಕೆ.ಸಿ.ಎಸ್.ಆರ್ ನಿಯಮ 407ರ ಪ್ರಕಾರ ಸೇವಾವಹಿಗಳಲ್ಲಿ ಪ್ರತಿ ಆರ್ಥಿಕ ವರ್ಷಾಂತ್ಯದಲ್ಲಿ ಸಂಬಂಧಿಸಿದ ನೌಕರರು ಸೇವಾ ಪುಸ್ತಕ ಪರಿಶೀಲಿಸಿರುವ ಬಗ್ಗೆ ನೌಕರರ ಸಹಿ ತೆಗೆದುಕೊಂಡಿರುವುದಿಲ್ಲ ಕ್ರಮ ಕೈಗೊಳ್ಳಲು ಸೂಚಿಸಿದೆ.

ಯಾವುದೇ ಸೇವಾ ವಹಿಗಳಲ್ಲೂ ನಾಮ ನಿರ್ದೇಶನ ಪತ್ರ ಲಗತ್ತಿಸಿಲ್ಲದೆ ಇರುವುದು ಆಕ್ಷೇಪಾರ್ಹವಾಗಿರುತ್ತದೆ. ಕೆ.ಸಿ.ಎಸ್.ಆರ್ ನಿಯಮ 292 (ii) (iv) ಮತ್ತು ನಿಯಮ 302ರ ಪ್ರಕಾರ ಕುಟುಂಬ ಪಿಂಚಣಿ. ಐ.ಸಿ.ಆರ್.ಜಿ ಸಾಮೂಹಿಕ ವಿಮೆ, ಸಾಮಾನ್ಯ ಭವಿಷ್ಯ ನಿಧಿ ಇತರೆ ಸೌಲಭ್ಯಗಳನ್ನು ನಿಗಧಿತ ನಾಮ ನಿರ್ದೇಶನ ಪತ್ರಗಳನ್ನು ಸಂಬಂಧಿಸಿದ ನೌಕರರ ಸೇವಾ ಪುಸ್ತಕದಲ್ಲಿ ಕೂಡಲೇ ಲಗತ್ತಿಸಲು ಸೂಚಿಸಿದೆ.

ಸೇವಾ ವಹಿಗಳಲ್ಲಿ ನೌಕರರ ಜನ್ಮ ದಿನಾಂಕ ಕಾಲಂಗಳನ್ನು ಅಧಿಕಾರಿಗಳಿಂದ ದೃಢೀಕರಿಸಬೇಕಾಗಿರುತ್ತದೆ. ಸೇವಾ ವಹಿಗಳಲ್ಲಿ ಗಳಿಕೆ ರಜೆ ಮತ್ತು ಪರಿವರ್ತಿತ ರಜೆ ಲೆಕ್ಕಗಳನ್ನು ನಮೂದಿಸುವಾಗ ಕೆ.ಸಿ.ಎಸ್.ಆರ್ ನಿಯಮ 112 ಮತ್ತು 114ರ ಪ್ರಕಾರ ಪ್ರತಿ ಜನವರಿ ಮತ್ತು ಜುಲೈ 1ನೇ ತಾರೀಖಿನಂದು ಮುಂಗಡವಾಗಿ ನೌಕರರ ಲೆಕ್ಕಕ್ಕೆ ಜಮಾ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

1) ಶ್ರೀ ಯದುನಂದನ್ ದ್ವಿ.ದ.ಸ ಇವರಿಗೆ ದಿನಾಂಕ 05-08-2012ರಲ್ಲಿ ಪ್ರೊಬೇಷನರಿ ಅವಧಿ ಜಾರಿ ಮಾಡಲಾಗಿದ್ದು, ಇವರು ನಿಗಧಿತ ಇಲಾಖಾ ಪರೀಕ್ಷೆಯಾದ ಅಕೌಂಟ್ಸ್ ಹೈಯರ್ ತೇರ್ಗಡೆಯಾಗಿದ್ದು, ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿದ್ದು ಕನ್ನಡವನ್ನು ಎರಡನೇ ಭಾಷೆಯನ್ನಾಗಿ ತೆಗೆದುಕೊಂಡಿದ್ದು exemption certificate ನಿಗಧಿತ ನಮೂನೆಯಲ್ಲಿ ಪಡೆದು ಸೇವಾ ಪುಸ್ತಕದಲ್ಲಿ ನಮೂದಿಸಲು ಸೂಚಿಸಿದೆ.

# ಭಾಗ – 5

**15) ನಾಗರೀಕ ಸೌಲಭ್ಯ ನಿವೇಶನ (ಸಿ.ಎ ನಿವೇಶನ) ಗಳ ಹಂಚಿಕೆಯಿಂದ ಪ್ರಾಧಿಕಾರಕ್ಕೆ ಬರಬೇಕಾಗಿರುವ ಬಾಕಿ ಮೊತ್ತದ ವಸೂಲಿ ಕುರಿತು.**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿವಿಧ ವ್ಯಕ್ತಿಗಳು, ಸಂಘ ಸಂಸ್ಥೆಗಳಿಗೆ, ವಿವಿಧ ಉದ್ದೇಶಕ್ಕಾಗಿ ಹಂಚಿಕೆಯಾಗಿರುವ ನಾಗರೀಕ ಸೌಲಭ್ಯ ನಿವೇಶನಗಳಿಂದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬರಬೇಕಾಗಿದ್ದ ಪೂರ್ಣವಾದ ಮೊತ್ತವನ್ನು ನಿವೇಶನ ಪಡೆದ ಸಂಸ್ಥೆಗಳಿಂದ ವಸೂಲಿ ಮಾಡದಿರುವುದು ಲೆಕ್ಕ ತಪಾಸಣೆಯ ಅವಧಿಯಲ್ಲಿ ಕಂಡು ಬಂದಿರುತ್ತದೆ. ಈ ಬಗ್ಗೆ ಲೆಕ್ಕ ತನಿಖಾ ವಿಚಾರಣಾ ಪತ್ರ ಸಂಖ್ಯೆ 10, ದಿನಾಂಕ 13–08–2014ರಲ್ಲಿ ಅಗತ್ಯವಾದ ಸಂಪೂರ್ಣವಾದ ವಿವರಗಳನ್ನು ತನಿಖೆಗೆ ಹಾಜರು ಪಡಿಸುವಂತೆ ಸೂಚಿಸಲಾಗಿತ್ತು.

ಲೆಕ್ಕ ತನಿಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ ವಿವರ ಮುಂದಿನಂತಿದೆ.

| ಕ್ರ. ಸಂ. | ನಾಗರೀಕ ಸೌಲಭ್ಯ ನಿವೇಶನ ಪಡೆದಿರುವವರು. | ಹಂಚಿಕೆ ಪತ್ರ ನೀಡಿದ ದಿನಾಂಕ | ದಿನಾಂಕ 31–03–2014 ರ ಅಂತ್ಯಕ್ಕೆ ಬಾಕಿ ಮೊತ್ತ |
|---|---|---|---|
| 1) | ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ತುಮಕೂರು | 19–05–1998 | 717626 + ಬಡ್ಡಿ |
| 2) | ಅಧ್ಯಕ್ಷರು, ಸೇಂಟ್ ಮೈಕಲ್ಸ್ ಸೋಷಿಯಲ್ ವೆಲ್ ಫೇರ್ ಅಸೋಸಿಯೇಷನ್, ಬೆಂಗಳೂರು | 25–03–2008 | 423199+ ಬಡ್ಡಿ |
| 3) | ಅಧ್ಯಕ್ಷರು ಆಲ್‌ರೆಹಮಾನ್ ಎಜುಕೇಷನಲ್ ಟ್ರಸ್ಟ್. ರಿ. ತುಮಕೂರು | 25–03–2008 | 137218 + ಬಡ್ಡಿ |
| | | **ಒಟ್ಟು** | 1278043+ ಬಡ್ಡಿ |

ಮೇಲೆ ವಿವರಿಸಿದಂತೆ ಸದರಿ ಸಂಸ್ಥೆಗಳಿಂದ ರೂ. 1278043+ ಬಡ್ಡಿ ಮೊತ್ತವನ್ನು ಬಾಕಿ ವಸೂಲಿ ಮಾಡಬೇಕಾಗಿರುತ್ತದೆ. ಈ ಬಗ್ಗೆ ಕೂಡಲೇ ಅಗತ್ಯ ಕ್ರಮವಹಿಸಿ ಬಾಕಿ ಇರುವ ಈ ಮೊತ್ತವನ್ನು ವಸೂಲಿ ಮಾಡುವುದು ಹಾಗೂ ವಸೂಲಿ ಮತ್ತು ಜಮಾ ಮಾಡಿದ ವಿವರವನ್ನು ಲೆಕ್ಕ ತನಿಖೆಗೆ ಹಾಜರು ಪಡಿಸುವುದು.

**16) ನಾಗರೀಕ ಸೌಲಭ್ಯ ನಿವೇಶನ (ಸಿ.ಎ ನಿವೇಶನ) ಲಭ್ಯತೆ, ಹಂಚಿಕೆ ಹಾಗೂ ಬಾಕಿ ಮೊತ್ತ ವಸೂಲಿ ಕುರಿತು :**

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿರುವ ನಾಗರೀಕ ಸೌಕರ್ಯ ನಿವೇಶನ (ಸಿ.ಎ ನಿವೇಶನಗಳ ವಿವರ, ಲಭ್ಯತೆ, ಹಂಚಿಕೆ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ಮತ್ತು ವಿವರವಾಗಿ ನಿರ್ವಹಿಸದಿರುವುದು ಲೆಕ್ಕ ತನಿಖೆಯಲ್ಲಿ ಕಂಡುಬಂದಿರುತ್ತದೆ. ಸದರಿ ವಿವರಗಳನ್ನು ನಿರ್ವಹಿಸಿ ತನಿಖೆಗೆ

ಹಾಜರುಪಡಿಸುವಂತೆ ಲೆಕ್ಕ ತನಿಕಾ ವಿಚಾರಣಾ ಪತ್ರ ಸಂಖ್ಯೆ 10. ದಿನಾಂಕ 13-08-2014ರಂದು ವಿಚಾರಣೆ ಪತ್ರವನ್ನು ನೀಡಲಾಗಿರುತ್ತದೆ.

ಸಿ.ಎ ನಿವೇಶನಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.

1) ಲೇ ಔಟ್ ವಿನ್ಯಾಸ ಅನುಮೋದನೆ ನೀಡಿದ ಸಮಯದಲ್ಲಿ ಸದರಿ ಲೇಔಟ್ ಅನುಮೋದನಾ ರೀತ್ಯಾ ಲಭ್ಯ ಹಾಗೂ ಪೂರ್ಣ ಸಿ.ಎ ನಿವೇಶನಗಳನ್ನು ಮಾಲೀಕರು / ಸಂಸ್ಥೆಯಿಂದ ಪ್ರಾಧಿಕಾರಕ್ಕೆ ಹಸ್ತಾಂತರ ಪರಿತ್ಯಾಜನಾ ಪತ್ರ ಪಡೆಯುವಕ್ರಮ ಪರಿಪೂರ್ಣವಾಗಿರುವುದಿಲ್ಲ.
2) ಹೊಸ ಬಡಾವಣೆಗಳಲ್ಲಿ ರೂಪುಗೊಂಡ ಸಿ.ಎ ನಿವೇಶನಗಳ ಸಮಗ್ರ ಮಾಹಿತಿಗಳನ್ನು ದಾಖಲಿಸಿಲ್ಲ ಮತ್ತು ನಿರ್ದಿಷ್ಟ ವಹಿಯಲ್ಲಿ ನಿರ್ವಹಿಸಿರುವುದಿಲ್ಲ.
3) ಸಿ.ಎ ನಿವೇಶನಗಳನ್ನು ಪ್ರಾಧಿಕಾರದ ಆಸ್ತಿ ವಹಿಯಲ್ಲಿ ದಾಖಲಿಸಿರುವುದಿಲ್ಲ.
4) ವಾಸ್ತವವಾಗಿ ಲಭ್ಯವಿರುವ ಸಿ.ಎ ನಿವೇಶನಗಳ ಅಧಿಕೃತ ಪಟ್ಟಿ/ ವಹಿಯನ್ನು ನಿರ್ವಹಿಸಿರುವುದಿಲ್ಲ.
5) ಸಿ.ಎ ನಿವೇಶನಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ.
6) ಸಿ.ಎ ನಿವೇಶನ ಗುತ್ತಿಗೆದಾರರಿಂದ ವಸೂಲಿ ಮಾಡಬೇಕಾದ ಮೊತ್ತದ ಡಿ.ಸಿ.ಬಿ ನಿರ್ದಿಷ್ಟ ವಹಿಯನ್ನು ಸ್ಪಷ್ಟ ವಿವರಗಳೊಂದಿಗೆ ನಿರ್ವಹಿಸಿರುವುದಿಲ್ಲ.
7) 2013-14ನೇ ಸಾಲಿನ ಅಂತ್ಯದವರೆವಿಗೂ ಹೊಸದಾಗಿ ಸೇರ್ಪಡೆಯಾದ ಎಲ್ಲಾ ನಿವೇಶನಗಳ ಪರಿಪೂರ್ಣ ಮಾಹಿತಿಗಳನ್ನು ಅಧಿಕೃತವಾಗಿ ದಾಖಲಿಸಿರುವುದಿಲ್ಲ.
8) 2012-13ನೇ ಸಾಲಿನ ಅಂತ್ಯಕ್ಕೆ ರೂ. 14,20,579/- ಗಳ ಗುತ್ತಿಗೆ ಮೊತ್ತ ಬಾಕಿ ಇದ್ದು, ಈ ಮೊತ್ತದ ಪೂರ್ಣ ವಸೂಲಿಗೆ ಕೈಗೊಂಡ ಕ್ರಮ ಮತ್ತು ನಿಖರ ಬಾಕಿ ವಹಿ ವಿವರಗಳನ್ನು ನಿರ್ವಹಿಸಿರುವುದಿಲ್ಲ.

ಸಿ.ಎ ನಿವೇಶನಗಳ ಸ್ಪಷ್ಟ, ಪರಿಪೂರ್ಣ, ವಾಸ್ತವ ವಿವರಗಳನ್ನು ನಿರ್ವಹಿಸುವುದು ಅತ್ಯಂತ ಮಹತ್ವ ಪೂರ್ಣ ಮತ್ತು ಜವಾಬ್ದಾರಿ ಕಾರ್ಯವಾಗಿರುತ್ತದೆ. ನಿರ್ಲಕ್ಷತೆ ವಹಿಸಿದ್ದಲ್ಲಿ ಪ್ರಾಧಿಕಾರಕ್ಕೆ ಪ್ರತ್ಯಕ್ಷ / ಪರೋಕ್ಷವಾಗಿ ನಷ್ಟ ಉಂಟಾಗುವ ಸಾದ್ಯತೆ ಇರುತ್ತದೆ ಹಾಗೂ ನಗರ ಯೋಜನೆ ವಿನ್ಯಾಸದ ಮೂಲ ದ್ಯೇಯೋದ್ದೇಶ ವಿಫಲವಾದಂತಾಗುತ್ತದೆ.

ಆದ್ದರಿಂದ ಮೇಲಿನ ನ್ಯೂನ್ಯತೆ ಸರಿಪಡಿಸಿಕೊಳ್ಳುವುದು ತನಿಖೆಗೆ ಲಭ್ಯವಾದ ಸಿ.ಎ ನಿವೇಶನಗಳ ಪಟ್ಟಿಯನ್ನು ಅನುಬಂಧ 6 ರಲ್ಲಿ ವರದಿಯೊಂದಿಗೆ ಲಗತ್ತಿಸಿದೆ.

**17) ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿರುವ ವಸತಿ ನಿವೇಶನಗಳ ವಿವರ.**

2013–14ನೇ ಸಾಲಿನಲ್ಲಿ ವಿತರಿಸಲಾಗಿರುವ ವಸತಿ ನಿವೇಶನಗಳ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ವಿಚಾರಣಾ ಪತ್ರದ ಸಂಖ್ಯೆ 02/2014–15 ದಿನಾಂಕ 08–08–2014ರಂದು ಸೂಚಿಸಿದ್ದರೂ ಸಹ ವಿವರಗಳ ದಾಖಲಾತಿ ವಹಿಯನ್ನು ತನಿಖೆಗೆ ಹಾಜರುಪಡಿಸಿರುವುದಿಲ್ಲ. ಹಾಗೂ 2013ನೇ ಸಾಲಿನ ವರದಿಯಂತೆ ಪ್ರಾಧಿಕಾರದ ಅಧೀನದಲ್ಲಿರುವ ವಸತಿ ನಿವೇಶನಗಳ ವಿವರ ಮುಂದಿನಂತಿರುತ್ತದೆ.

| ಕ್ರ. ಸಂ. | ವಿವರ | ನಿವೇಶಗಳ ಒಟ್ಟು ಸಂಖ್ಯೆ | ವಿತರಣೆಯಾಗಿರುವ ನಿವೇಶನಗಳ ಸಂಖ್ಯೆ | ಉಳಿಕೆ ನಿವೇಶನಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1) | ಮೆಳೇಕೋಟೆ – ವೀರಸಾಗರ | 553 | – | 553 |
| 2) | ಶೆಟ್ಟಿಹಳ್ಳಿ ವಸತಿ ಬಡಾವಣೆ | 40 | – | 40 |
| 3) | ಕ್ಯಾತ್ಸಂದ್ರ ವಸತಿ ಬಡಾವಣೆ | 108 | – | 108 |
| | **ಒಟ್ಟು** | **701** | | **701** |

ಬಾಕಿ ಉಳಿದಿರುವ 701 ನಿವೇಶನಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಕ್ರಮವಹಿಸಬಹುದಾಗಿರುತ್ತದೆ.

**18) ಮೂಲೆ ನಿವೇಶನಗಳ ಹರಾಜಿಗೆ ಸಂಬಂಧಿಸಿದಂತೆ**

2013–14 ನೇ ಸಾಲಿನಲ್ಲಿ ಮೂಲೆ ನಿವೇಶನಗಳ ಹರಾಜಿಗೆ ಸಂಬಂಧಿಸಿದಂತೆ, ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ವಿಚಾರಣಾ ಪತ್ರದ ಸಂಖ್ಯೆ 02/2014–15 ದಿನಾಂಕ 08–08–2014ರಂದು ಸೂಚಿಸಿದ್ದರೂ ಸಹ ದಾಖಲಾತಿ ವಹಿಯನ್ನು ಹಾಜರುಪಡಿಸಿರುವುದಿಲ್ಲ, ಹಾಗೂ 2012–2013ನೇ ಸಾಲಿನಲ್ಲಿ ತಿಳಿಸಿರುವಂತೆ 30 ನಿವೇಶನಗಳು ಹರಾಜಾಗಿದ್ದು 6ಜನ ಅಭ್ಯರು ಬಿಡ್‌ದಾರರು 2012–13ರ ಲೆಕ್ಕ ತನಿಖೆಯ ದಿನಾಂಕದವರೆಗೆ ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದು, 2013–14ನೇ ಸಾಲಿನಲ್ಲಿ ಪಾವತಿಸಿರುತ್ತಾರೆ ವಿವರ ಮುಂದಿನಂತಿರುತ್ತದೆ.

| ಕ್ರ. ಸಂ. | ನಿವೇಶನ ಸಂಖ್ಯೆ | ಬಿಡ್‌ದಾರರು | ಆರಂಭ ಶಿಲ್ಕು | ಜಮೆ ಮೊತ್ತ | ಬಾಕಿ ಮೊತ್ತ |
|---|---|---|---|---|---|
| 1) | 1104/A | ಎಲ್.ಎಂ ಅರುಣ್ ಕುಮಾರ್ | 1512166 | 1512166 | – |
| 2) | 971/A | ಬಿ.ಎಸ್ ರವಿಶಂಕರ್ | 2268623 | 2268623<br>139846 | – |
| 3) | 970/A | ಟಿ.ಸಿ. ಕುಮಾರ್ | 2398649 | – | 2398649 |
| 4) | 938/A | ಹೆಚ್.ಎಲ್ ಶರತ್‌ಕುಮಾರ್ | 721649 | – | – |
| 5) | 982/A | ಆಫ್ರೀನ್ ಫಿರ್‌ದೊಸ್ | 1306626 | 1306626 | – |
| 6) | 1004/A | ಬಿ.ಎಸ್ ರವಿಶಂಕರ್ | 2220886 | 2220886<br>136904 | – |
| | | | **10428599** | **7585051** | **2398649** |

ದಿನಾಂಕ 27–12–2012ರಂದು ಮೇಳೇಕೋಟೆ ವೀರಸಾಗರ ಬಡಾವಣೆ ಮೂಲೆ ನಿವೇಶನಗಳ ಬಹಿರಂಗ ಹರಾಜಿನಲ್ಲಿ ಶ್ರೀ ಹೆಚ್.ಎಲ್ ಶರತ್‌ಕುಮಾರ್ ಬಿನ್ ಹೆಚ್.ಪಿ ಲಿಂಗರಾಜುರವರಿಗೆ ನಿವೇಶನ ಸಂಖ್ಯೆ 938/ಎ ಗೆ ಚದುರ ಅಡಿ 1 ಕ್ಕೆ 1620 X 593.95 ರಂತೆ ಒಟ್ಟು ಮೌಲ್ಯ 962199/– ಬಿಡ್ ಆಗಿರುತ್ತದೆ. ಅದರಂತೆ ನಿಯಮಾನುಸಾರ 25% ಮೊಬಲಗು 2,40,550/– ಗಳ ರಶೀತಿ ಸಂಖ್ಯೆ 26912 ಹಾಗೂ 26985 ದಿನಾಂಕ 27–12–2012 ರಂದು ಸ್ವೀಕೃತವಾಗಿರುತ್ತದೆ. ಆದರೆ ಬಿಡ್‌ದಾರ್‌ರು ಬಾಕಿ ಮೊತ್ತ 7,21,649/–ಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾಗಿರುತ್ತದೆ. ಆದರೆ ಬಿಡ್‌ದಾರರಾದ ಶ್ರೀ ಹೆಚ್.ಎಲ್ ಶರತ್‌ಕುಮಾರ್ ರವರು ದಿನಾಂಕ 03–08–2013ರಂದು ಮನವಿಯನ್ನು ಸಲ್ಲಿಸಿ ಈ ನಿವೇಶನದಲ್ಲಿ ವಾಸದ ಕಟ್ಟಡ ಕಟ್ಟಲು ಸಾದ್ಯವಿಲ್ಲ ಎಂಬುದಾಗಿ ತಿಳಿಸಿ ಪಾವತಿಸಿರುವ ಶೇ. 25% ರಷ್ಟು ಮೊಬಲಗನ್ನು ಹಿಂದಿರುಗಿಸಬೇಕೆಂದು ಕೋರಿರುತ್ತಾರೆ. ಅದರಂತೆ ಯೋಜನಾ ಶಾಖೆಯ ಅಭಿಪ್ರಾಯದ ಮೇರೆಗೆ ಶೇ. 25% ರಷ್ಟು ಮೊಬಲಗನ್ನು ಹಿಂದಿರುಗಿಸುವ ಸಂಬಂಧ ದಿನಾಂಕ 22–02–2014ರಂದು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚಿಗೊಂಡು ಪಾವತಿಸಲಾಗಿರುವ ಮುಂಗಡ ಹಣವನ್ನು ಪಾವತಿಸುವಂತೆ ಸರ್ವಾನುಮತದಿಂದ ತೀರ್ಮಾನಿಸಿ ಚೆಕ್ ಸಂಖ್ಯೆ 102561 ರಲ್ಲಿ ರೂ. 2,25,550/– ಹಾಗೂ ಚೆಕ್ ಸಂಖ್ಯೆ 102562 ರಲ್ಲಿ ರೂ. 15,000/– ಒಟ್ಟು 2,40,550/–ಗಳನ್ನು ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಹಿಂದಿರುಗಿಸಲಾಗಿದೆ.

**19) ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳಿಗೆ ಸಂಬಂಧಿಸಿದಂತೆ.**

2013–14ನೇ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ, ತುಮಕೂರು ರವರಲ್ಲಿ ಇರುವ ನಿವೇಶನಗಳ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ 02/2014–15 ದಿನಾಂಕ 08–08–2014ರಂದು ಸೂಚಿಸಿದ್ದರೂ ಸಹ ನಿವೇಶನಗಳಿಗೆ ಸಂಬಂಧಿಸಿದಂತೆ ವಹಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 2012–13ರ ವರದಿಯನ್ನು ಆಧರಿಸಿ ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರುರವರ ಅಧೀನದಲ್ಲಿ ಒಟ್ಟು 141 ನಾಗರೀಕ ಸೌಲಭ್ಯ ನಿವೇಶನಗಳಿರುವುದು ಕಂಡು ಬಂದಿರುತ್ತದೆ.

ಹಾಗೂ ಮೇಲ್ಕಂಡ ನಿವೇಶನಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**20) ಲೇಔಟ್ ಅನುಮೋದನೆ ಕಡತಗಳ ಪರಿಶೀಲನೆಯ ಬಗ್ಗೆ.**

2013–14ನೇ ಸಾಲಿನ ವಿನ್ಯಾಸಗಳನ್ನು ಅನುಮೋದನೆ ಮಾಡುವ ಸಂದರ್ಭದಲ್ಲಿ ಅಭಿವೃದ್ಧಿ ಶುಲ್ಕ ಚದುರ ಮೀಟರ್ ಒಂದಕ್ಕೆ 150 ರೂ. ಪಾವತಿಸಿಕೊಂಡು ವಿನ್ಯಾಸಕ್ಕೆ ಅನುಮೋದನೆ ನೀಡಿರುವುದು ಲೆಕ್ಕ ತನಿಖೆಯಿಂದ ಕಂಡು ಬಂದಿರುತ್ತದೆ. ಸ್ಥಳೀಯ ಸಂಸ್ಥೆಗಳು ಮೂಲಭೂತ ಸೌಲಭ್ಯ ನೀಡುವ ಅನಿವಾರ್ಯತೆ ಇರುವುದರಿಂದ ಮತ್ತು ಆರ್ಥಿಕ ಕ್ರೋಢೀಕರಣ ಮಾಡುವ ಉದ್ದೇಶದಿಂದ ಚದುರ ಮೀಟರ್ ಒಂದಕ್ಕೆ 150 ಪಾವತಿಸಿಕೊಳ್ಳುವುದನ್ನು ಪರಿಷ್ಕರಿಸಬಹುದು. ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಆಡಳಿತವರ್ಗದವರು ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ಸೂಚಿಸಿದೆ. ಹಾಗೂ ಮಾರುಕಟ್ಟೆಯಲ್ಲಿ ವಸತಿಗಳ ಬೆಲೆ ದುಪ್ಪಟ್ಟವಾಗಿರುವುದರಿಂದ ಇದು ತುಂಬಾ ಅನಿವಾರ್ಯವಾಗಿರುತ್ತದೆ. ಈ ಬಗ್ಗೆ ಆಡಳಿತ ವರ್ಗದವರು ತುರ್ತು ಗಮನ ಹರಿಸಲು ಸೂಚಿಸಿದೆ.

**21) ಟೆಂಡರ್ ಪರಿಮಾಣಕ್ಕಿಂತ ಹೆಚ್ಚಿಗೆ ಪಾವತಿಸಿರುವುದು.**

ತುಮಕೂರು ಅಮಾನಿಕೆರೆ ಜಿಲ್ಲಾಧಿಕಾರಿ ಕಛೇರಿ ಮುಂಭಾಗದ ಉದ್ಯಾನವನದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ನೃತ್ಯ ಕಾರಂಜಿ ವೀಕ್ಷಣೆಗೆ ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಗ್ಯಾಲರಿ ನಿರ್ಮಾಣ.

ಗುತ್ತಿಗೆದಾರರು : ಸಿ.ಕೆ ವೆಂಕಟೇಶ

ಅಂದಾಜು ಮೊತ್ತ : 10,00,000

ಕಾಮಗಾರಿ ಮೊತ್ತ 9,48,513

ಕಾರ್ಯಾದೇಶ ದಿನಾಂಕ 24-01-2013

ಪ್ರಾರಂಭಿಸಬೇಕಾದ ದಿನಾಂಕ : 24-01-2013

ಪೂರ್ಣಗೊಳಿಸಬೇಕಾದ ದಿನಾಂಕ : 23-05-2013

ಮಾಹೆಯಾನ ಪ್ರಗತಿ : 237129

1ನೇ ಭಾಗಶ: ಬಿಲ್ ಮೊತ್ತ 786589, ಚೆಕ್ ನಂ. 785911 ದಿನಾಂಕ 19-06-2013ರಲ್ಲಿ ರೂ. 5,69,706/- ಪಾವತಿಸಿದ್ದು, ಅಳತೆ ಪುಸ್ತಕ ಸಂಖ್ಯೆ 762 ಪುಟ ಸಂಖ್ಯೆ 73–75 ಸದರಿ ಬಿಲ್‌ನ್ನು ಪರಿಶೀಲಿಸಿದಾಗ ಟೆಂಡರ್‌ನಲ್ಲಿ ಇರುವ ಪರಿಮಾಣಕ್ಕಿಂತ ಹೆಚ್ಚಾಗಿ ಪಾವತಿಸಿದ್ದು, ವರ್ಕ್‌ಸ್ಲಿಪ್ ಐಟಂ ಆಗಿರುತ್ತದೆ. ವರ್ಕ್‌ಸ್ಲಿಪ್ ಐಟಂ ಅನ್ನು ಮಂಜೂರಾತಿ ಪಡೆಯುವಾಗ ತಪ್ಪಾಗಿ ಲೆಕ್ಕಚಾರ ಮಾಡಿರುತ್ತಾರೆ. ಈ ಕೆಳಗಿನಂತಿರುತ್ತದೆ.

ಟೆಂಡರ್ ಪರಿಮಾಣ : 25.43
+ 25% 6.357
-----------------------
ಒಟ್ಟು 31.787 ಕ್ಕೆ ಟೆಂಡರ್ ದರ ನೀಡಬಹುದಾಗಿರುತ್ತದೆ.
ನಿರ್ವಹಿಸಿರುವ ಪರಿಮಾಣ 54.915
31.787
--------------------------------
ಹೆಚ್ಚಿನ ಪರಿಮಾಣ 23.128
--------------------------------
ಈ ಹೆಚ್ಚಿನ ಪರಿಮಾಣಕ್ಕೆ ಎಸ್‌ಆರ್ + ಟಿ.ಪಿ ದರದಂತೆ 2985
5.09 ಕಡಿಮೆ – 152
-----------------------------------------
**2833**

23.128 ರ ಪರಿಮಾಣಕ್ಕೆ 2833 ರೂ. ದರ ನೀಡಬೇಕಾಗಿರುತ್ತದೆ.

ನೀಡಿರುವ ದರ 2985
ನೀಡಬೇಕಾದ ದರ 2833
----------------------
ಹೆಚ್ಚಿನ ದರ ನೀಡಿದೆ 152 23.135

ಹೆಚ್ಚಿಗೆ ಪಾವತಿಸಿದ್ದು 3212 ರೂ.ಗಳನ್ನು ವರ್ಕ್ಸ್ ಸ್ಲಿಪ್ ಐಟಂಗೆ ತಪ್ಪಾಗಿ ಲೆಕ್ಕ ಹಾಕಿ ಹೆಚ್ಚಾಗಿ ಪಾವತಿಸಿರುವ ಮೊತ್ತ ರೂ. 3212 ಗಳನ್ನು ಈ ಮೇಲೆ ಸೂಚಿಸಿರುವ ಗುತ್ತಿಗೆದಾರರಿಂದ ವಸೂಲಾತಿ ಮಾಡಲು ಸೂಚಿಸಿದೆ.

**22) ಕಾಮಗಾರಿ ಬಿಲ್‌ಗಳಲ್ಲಿ ತೆರಿಗೆ ಹಿಡಿದು ಜಮಾ ಮಾಡಿರುವುದು.**

ಕಾಮಗಾರಿ ಬಿಲ್‌ಗಳಲ್ಲಿ ಈ ಕೆಳಗಿನಂತೆ ತೆರಿಗೆಗಳನ್ನು ಕಟಾಯಿಸಿ ಜಮಾ ಮಾಡಿರುತ್ತಾರೆ.

| | |
|---|---|
| ರಾಜಧನ | 8234 |
| ಮಾರಾಟ ಕರ | 39627 |
| ಆದಾಯ ತೆರಿಗೆ | 12384 |
| ಕಾರ್ಮಿಕರ ಕಟ್ಟಡ ನಿಧಿ | 9906 |
| ಗುತ್ತಿಗೆದಾರರ ಕ್ಷೇಮ ನಿಧಿ | 990 |
| ಒಟ್ಟು | 71141 |

ಬಿಲ್‌ಗಳಲ್ಲಿ ಹಿಡಿದು ಜಮಾ ಮಾಡಿರುತ್ತಾರೆ. ಕಾಮಗಾರಿವಾರು ವಿವರವನ್ನು ಅನುಬಂಧ 7ರಲ್ಲಿ ನೀಡಿದೆ.

**ಲೆಕ್ಕ ತನಿಖಾ ಶುಲ್ಕದ ಘೋಷ್ವಾರೆ**

ನಗರಾಭಿವೃದ್ಧಿ ಪ್ರಾಧಿಕಾರದ 2013–14ನೇ ಸಾಲಿನ ಲೆಕ್ಕ ತಪಾಸಣೆಗೆ ವಿಧಿಸಬೇಕಾದ ಲೆಕ್ಕ ತನಿಖಾ ಶುಲ್ಕದ ಲೆಕ್ಕಚಾರ ಈ ಕೆಳಗಿನಂತಿದೆ.

I. 2013-14 ಕ್ಕೆ

| | |
|---|---|
| ಮೂಲ ಆದಾಯ : | 231311320 |
| ಮೂಲ ವೆಚ್ಚ : | 298395405 |
| ಒಟ್ಟು | 529706725 |

**II. ಕಳೆಯಬೇಕಾದ ಮೊತ್ತ**

| | | |
|---|---|---|
| 1) | ಉಳಿತಾಯ ಖಾತೆಯ ಮೇಲಿನ ಬಡ್ಡಿ | 2263606 |
| 2) | ಉತ್ತಮತೆ ಶುಲ್ಕ | 3096446 |
| 3) | ವರ್ಗಾವಣೆ | 12500000 |
| 4) | ಬ್ಯಾಂಕ್ ನಿಶ್ಚಿತ ಠೇವಣಿ ರದ್ದುಪಡಿಸಿ ಉಳಿತಾಯ ಖಾತೆಗೆ ಜಮಾ | 105119937 |
| 5) | ಬ್ಯಾಂಕ್ ಹೊಂದಾಣಿಕೆ | 226531 |
| 6) | ಪ್ರಾರಂಭಿಕ ಠೇವಣಿ ಹಿಂತಿರುಗಿಸಿರುವುದು | 74837 |
| 7) | ಅಕ್ರಮ ಸಕ್ರಮ | 1695732 |
| 8) | ರಜೆ ಮತ್ತು ನಿವೃತ್ತಿ ವೇತನದ ಅಂಶದಾನ | 863526 |
| 9) | ಲೆಕ್ಕ ತನಿಖಾ ಶುಲ್ಕ | |
| 10) | ಬ್ಯಾಂಕ್ ಕಮೀಷನ್ | 4245 |

| | | |
|---|---|---|
| 1) | ಹೊಂದಾಣಿಕೆ ಮೊತ್ತ | 349683 |
| 2) | ವರ್ಗಾವಣೆ (ಫಂಡ್) | 12500000 |
| 3) | ಠೇವಣಿ ಮರುಪಾವತಿ | 1826613 |
| 4) | ನಿವೇಶನ ನೊಂದಣಿ ಶುಲ್ಕ | 4500 |

ಕಳೆಯ ಬೇಕಾದ ಮೊತ್ತ ರೂ. 140525656

ಮೂಲ ಆದಾಯ + ವೆಚ್ಚ = 529706725

ಕಳೆಯುವುದು 140525656

ಲೆಕ್ಕ ತನಿಖಾ ಶುಲ್ಕಕ್ಕೆ ಗುರಿಯಾಗುವ ಮೌಲ್ಯ 389181069

$$\frac{389181069 \times 0.20}{100} = 778362$$

ಲೆಕ್ಕ ತನಿಖಾ ಶುಲ್ಕವನ್ನು 100/– ರೂ.ಗಳಿಗೆ 0.20 ಪೈಸೆಯಂತೆ ವಿಧಿಸಿದೆ. ಇದರಿಂದ 2013–14ಕ್ಕೆ ರೂ. 7,78,362/- ಗಳು ಲೆಕ್ಕ ತನಿಖಾ ಶುಲ್ಕ ವಿಧಿಸಲಾಗಿದೆ.

| | |
|---|---|
| 01–04–2013ಕ್ಕೆ ಪ್ರಾರಂಭಿಕ ಶಿಲ್ಕು | 1432452 |
| 2013–14ಕ್ಕೆ ತಗಾದೆ | 778362 |
| ಒಟ್ಟು | 2210814 |
| 2013–14 ಕ್ಕೆ ಜಮಾ | – |
| 31–03–2014 ಕ್ಕೆ ಅಂತಿಮ ಶಿಲ್ಕು | 2210814 |

ಬಾಕಿ ಉಳಿದಿರುವ ಲೆಕ್ಕ ತನಿಖಾ ಶಿಲ್ಕು ರೂ. 22,10,814/-ಗಳನ್ನು ಕೂಡಲೇ ಜಮಾ ಮಾಡಲು ಸೂಚಿಸಿದೆ.

**23) ಸಾಮಾನ್ಯ ಅಭಿಪ್ರಾಯ :**

ಲೆಕ್ಕ ಪತ್ರ ನಿರ್ವಹಣೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ.

ಸಹಿ/–
ಸಹಾಯಕ ನಿಯಂತ್ರಕರು
ಸ್ಥಳೀಯ ಲೆಕ್ಕ ಪರಿಶೋಧನ ವರ್ತುಲ
ತುಮಕೂರು

## ಅನುಬಂಧ – 1 ಭಾಗ– 2 ಕಂಡಿಕೆ– 3

ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಈ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ತನಿಖಾ ವರದಿಗಳಲ್ಲಿ ತೀರುವಳಿಯಾಗದೆ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ವಿವರಗಳು ಮುಂದಿನಂತಿವೆ.

| ಕ್ರ.ಸಂ | ಲೆಕ್ಕ ತನಿಖೆಯ ವರ್ಷ | ಆಕ್ಷೇಪಣೆ | | ವಸೂಲಾತಿ | |
|---|---|---|---|---|---|
| | | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ |
| 1 | 1993–94 | 9 | 9721313 | 18 | 5,00,449 |
| 2 | 1994–95 | 3 | 370000 | 13 | 225259 |
| 3 | 1995–96 | 1 | 166254 | 3 | 31196 |
| 4 | 1996–97 | 17 | 1202359 | 11 | 25067 |
| 5 | 1997–98 | – | | 9 | 50205 |
| 6 | 1998–99 | 13 | 1357297 | 1 | 63640 |
| 7 | 1999–2000 | – | | 1 | 1295 |
| 8 | 2000–2001 | 1 | 83338 | 7 | 60426 |
| 9 | 2001–2002 | – | | – | – |
| 10 | 2002–2003 | – | | 1 | 4552 |
| 11 | 2003–2004 | – | | – | – |
| 12 | 2004–2005 | – | | 11 | 374514 |
| 13 | 2005–2006 | 1 | 225304 | – | – |
| 14 | 2006–2007 | 1 | 97390 | 5 | 35150 |
| 15 | 2007–2008 | 1 | 808992 | 12 | 216107 |
| 16 | 2008–2009 | 4 | 1348334 | 5 | 168930 |
| 17 | 2009–2010 | – | | – | – |
| 18 | 2010–2011 | 2 | 340062 | – | – |
| 19 | 2011–2012 | – | – | 3 | 126710 |
| 20 | 2012–2013 | – | – | 4 | 40688 |
| | **ಒಟ್ಟು** | **53** | **15720643** | **104** | **1924188** |

**ಅನುಬಂಧ –2 ಭಾಗ 3, ಕಂಡಿಕೆ 4**

# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

**ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2013–14 ನೇ ಸಾಲಿನ ವಿವಿಧ ಬ್ಯಾಂಕುಗಳ ಕ್ರೋಢೀಕೃತ ಆರ್ಥಿಕ ಪರಿಸ್ಥಿತಿ**

| ಕ್ರ. ಸಂ. | ಬ್ಯಾಂಕಿನ ಹೆಸರು | ಉಳಿತಾಯ ಖಾತೆ ಸಂಖ್ಯೆ | ದಿನಾಂಕ 01–04–2013 ಕ್ಕೆ ಪ್ರಾರಂಭಿಕ ಶಿಲ್ಕು | 2013–14 ಜಮಾ | ಒಟ್ಟು | 2013–14ಕ್ಕೆ ಖರ್ಚು | 31–03–2014 ಕ್ಕೆ ಅಂತಿಮ ಶಿಲ್ಕು | ಭೌತಿಕ ಪ್ರಕಾರ ಅಂತಿಮ ಶಿಲ್ಕು | ವ್ಯತ್ಯಾಸ |
|---|---|---|---|---|---|---|---|---|---|
| 1. | ವಿಜಯ ಬ್ಯಾಂಕ್ | 12467 | 300388 | 12135 | 312523 | 0 | 312523 | 312523 | 0 |
| 2. | ಅಲಹಾಬಾದ್ | 7443 | 5960 | 248 | 6208 | 0 | 6208 | 6208 | 0 |
| 3. | ಎಸ್.ಬಿ.ಟಿ | 67021499122 | 20634 | 844 | 21478 | 10 | 21468 | 21468 | 0 |
| 4. | ಸಿ.ಕೆ.ಜಿ.ಬಿ | 13173064245 | 17301286 | 12921584 | 30222870 | 21200000 | 9022870 | 9022870 | 0 |
| 5. | ಸಿ.ಕೆ.ಜಿ.ಬಿ | 13173054703 | 3149500 | 4454027 | 7603527 | 4520000 | 3083527 | 3083527 | 0 |
| 6. | ಎಸ್.ಬಿ.ಎಂ | 54040241346 | 953668 | 545505 | 1499173 | 1456732 | 42441 | 139686 | 97245 |
| 7. | ಕೆನರಾ ಬ್ಯಾಂಕ್ | 7044 | 89490 | 12721 | 102211 | 0 | 102211 | 102211 | 0 |
| 8. | ಕೆನರಾ ಬ್ಯಾಂಕ್ | 52211766557 | 4004 | 10828 | 14832 | 0 | 14832 | 14832 | 0 |
| 9. | ಕಾರ್ಪೋರೇಷನ್ ಬ್ಯಾಂಕ್ | 12701 | 6797 | 275 | 7072 | 0 | 7072 | 7072 | 0 |
| 10. | ಕಾರ್ಪೋರೇಷನ್ ಬ್ಯಾಂಕ್ | 14736 | 695 | 28 | 723 | 0 | 723 | 723 | 0 |
| 11. | ಇಂಡಿಯನ್ ಬ್ಯಾಂಕ್ | 771276709 | 2252 | 91 | 2343 | 0 | 2343 | 2343 | 0 |
| 12. | ಎಸ್.ಬಿ.ಟಿ ಟ್ರಾವಂಕೂರ್ | 67026650849 | 728797 | 1922239 | 2651036 | 2460000 | 191036 | 294713 | 103677 |
| 13. | ಎಸ್.ಬಿ.ಟಿ ಟ್ರಾವಂಕೂರ್ | 67026651355 | 12038583 | 5452805 | 17491388 | 14700000 | 2791388 | 2791388 | 0 |
| 14. | ಬ್ಯಾಂಕ್ ಆಫ್ ಇಂಡಿಯ | 210000006 | 1303 | 0 | 1303 | 0 | 1303 | 1303 | 0 |
| 15. | ಸಿ.ಕೆ.ಜಿ.ಬಿ | 13173032097 | 181170 | 2301 | 183471 | 180000 | 3471 | 3471 | 0 |
| 16. | ಕಾರ್ಪೋರೇಷನ್ ಬ್ಯಾಂಕ್ | 17816 | 11784 | 476 | 12260 | 0 | 12260 | 12260 | 0 |
| 17. | ಆಕ್ಸಿಸ್ ಬ್ಯಾಂಕ್ | 343010100059769 | 7083658 | 59486102 | 66569760 | 66090841 | 478919 | 483919 | 5000 |
| 18. | ಎಸ್.ಬಿ.ಎಂ | 64021919081 | 462656 | 2727167 | 3189823 | 1839829 | 1349994 | 1522475 | 172481 |
| 19. | ಆಕ್ಸಿಸ್ ಬ್ಯಾಂಕ್ | 4848 | 258930 | 0 | 258930 | 36300 | 222630 | 222630 | 0 |
| 20. | ಎಸ್.ಬಿ.ಎಂ, ಸಿದ್ದಗಂಗಾ ಬ್ರಾಂಚ್ | 64138533695 | 0 | 52810 | 52810 | 0 | 52810 | 52810 | 0 |
| 21. | ಎಸ್.ಬಿ.ಎಂ | 54040240375 | 43220114 | 143689027 | 186909141 | 185891593 | 1017548 | 1323148 | 305600 |
| | | | **85821669** | **231291213** | **317112882** | **298375305** | **18737577** | **19421580** | **684003** |

**ಅನುಬಂಧ –3** **ಭಾಗ –3** **ಕಂಡಿಕೆ 8**

# ಹೂಡಿಕೆಗಳ ವಿವರಗಳು

2013–14ನೇ ಸಾಲಿನ ಹೂಡಿಕೆಯಲ್ಲಿ ಠೇವಣಿಗಳ ರೂಪದಲ್ಲಿ ತೊಡಗಿಸಿದ ವಿವರಗಳ ಘೋಷ್ವಾರೆ

| ಕ್ರ. ಸಂ. | ವಿವರಗಳು | ಹೂಡಿಕೆ ಮೊತ್ತ | ಬಡ್ಡಿ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1. | ದಿನಾಂಕ 01–04–2013ಕ್ಕೆ ಪ್ರಾರಂಭಿಕ ಶಿಲ್ಕು | 366206186 | 38598722 | 404804908 |
| 2. | ಎ) ಹೂಡಿಕೆ ಹೊಸದಾಗಿ ತೊಡಗಿಸಿರುವುದು | 45000000 | 4440562 | 49440562 |
| 3. | ಬಿ) ನವೀಕರಣ /ಮರುಹೂಡಿಕೆ | 366206186 | 38598722 | 404804908 |
| 4. | ಒಟ್ಟು ಹೂಡಿಕೆಯಲ್ಲಿ ತೊಡಗಿಸಿರುವ ಮೊತ್ತ | 411206186 | 43039284 | 454245470 |
| 5. | ಹಿಂಪಡೆತ ಮರುಹೂಡಿಕೆ / ನವೀಕರಣ | 366206186 | 38598722 | 404804908 |
| 6. | ಹಿಂಪಡೆದು ಪ್ರಾಧಿಕಾರದ ಲೆಕ್ಕಕ್ಕೆ ಜಮಾ ಮಾಡಿರುವುದು. | 8000649 | 809050 | 8809699 |
| 7. | ಹೂಡಿಕೆಯಲ್ಲಿ ಉಳಿದ ನಿವ್ವಳ ಮೊತ್ತ | 415499521 | 41180667 | 456680188 |

**ಅನುಬಂಧ –4** **ಭಾಗ –3** **ಕಂಡಿಕೆ – 8**

## ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ನಿಶ್ಚಿತ ಠೇವಣಿಯ ವಿವರಗಳು

| ಕ್ರ. ಸಂ. | ದಿನಾಂಕ | ತೊಡಗಿಸಿರುವ ಮೊತ್ತ | ಸರ್ಟಿಫಿಕೇಟ್ ನಂಬರ್ | ನವೀಕರಿಸಿದ ದಿನಗಳು | ಬಡ್ಡಿ ದರ | ದಿನಾಂಕ (ಇಂದ) | ದಿನಾಂಕ (ವರೆಗೆ) | ಬಡ್ಡಿಯೊಂದಿಗೆ ತೊಡಗಿಸಿದ ಮೊತ್ತ | ಬರುವ ಬಡ್ಡಿ | ಒಟ್ಟು ಮೊತ್ತ | ಷರಾ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | 14-7-2010 | 5000000 | 384595 | 365 | 8.75 | 29-7-2013 | 29-7-2014 | 12835959 | 1160540 | 13996499 | ಕೆನರಾ ಬ್ಯಾಂಕ್ ಎಸ್.ಎಸ್ ಪುರಂ |
| 2 | 14-7-2010 | 12774132 | 332375 | 365 | 9.25 | 24-9-2013 | 24-9-2014 | 12774132 | 1223230 | 13997362 | ಏಸ್.ಬಿ.ಎಂ ಮುಖ್ಯ ಶಾಖೆ |
| 3 | 3-8-2010 | 5000000 | 291563 | 366 | 9.75 | 02-8-2013 | 2-8-2014 | 6544207 | 661771 | 7205978 | ಕೆ.ಜಿ.ಬಿ ಬ್ಯಾಂಕ್ ಎಂ.ಜಿ ರೋಡ್ |
| 4 | 27-6-2005 | 333439 | 67237075606 | 366 | 8.75 | 29-7-2013 | 30-7-2014 | 579394 | 52536 | 631930 | ಎಸ್.ಬಿ.ಟಿ. ಬ್ಯಾಂಕ್ |
| 5 | 27-6-2005 | 582309 | 67237075209 | 366 | 8.75 | 29-7-2013 | 30-7-2014 | 1020132 | 92500 | 1112632 | |
| 6 | 31-3-2011 | 10000000 | 841969 | 366 | 9.25 | 3-4-2014 | 4-4-2015 | 13328772 | 1280042 | 14608814 | ಕೆನರಾ ಬ್ಯಾಂಕ್,ಅಶೋಕ ನಗರ |
| 7 | 2-4-2011 | 2500000 | 102914 | 366 | 9.75 | 12-4-2014 | 13-4-2015 | 3324646 | 325041 | 3649687 | ಕೆ.ಜಿ.ಬಿ ಬ್ಯಾಂಕ್, ಎಂ.ಜಿ ರೋಡ್ |
| 8 | 3-8-2011 | 10000000 | 291567 | 365 | 9.75 | 03-8-2013 | 3-8-2014 | 12195886 | 1233286 | 13429172 | ಕೆ.ಜಿ.ಬಿ ಬ್ಯಾಂಕ್ ಎಂ.ಜಿ ರೋಡ್ |
| 9 | 3-12-2011 | 20000000 | 406849 | 365 | 9.89 | 29-11-2013 | 29-11-2014 | 24344177 | 2409461 | 26753638 | ಕೆ.ಜಿ.ಬಿ ಬ್ಯಾಂಕ್ ಹನುಮಂತಪುರ |
| 10 | 1-3-2013 | 30000000 | 626793 | 365 | 9.60 | 25-3-2014 | 25/3/2015 | 35763298 | 3558864 | 39322162 | ಏಸ್.ಬಿ.ಎಂ ಎಸ್ಎಂಇ ಶಾಖೆ |
| 11 | 26-3-2014 | 585828 | 626791 | 365 | 9 | 26-3-2014 | 26/3/2015 | 585828 | 54531 | 640359 | |
| 12 | 30-6-2012 | 20000000 | 291848 | 366 | 9.60 | 2-7-2014 | 3-7-2015 | 24308678 | 2426026 | 26734704 | ಕೆ.ಜಿ.ಬಿ ಬ್ಯಾಂಕ್ ಎಂ.ಜಿ ರೋಡ್ (ಕೆರೆ) |
| 13 | 30-6-2012 | 10000000 | 332219 (64121775022) | 366 | 9.00 | 1-7-2014 | 2-7-2015 | 2160290 | 201669 | 2361959 | ಏಸ್.ಬಿ.ಎಂ ಮುಖ್ಯ ಶಾಖೆ |
| 14 | | | 332220 (64121773035) | 366 | 9.00 | 1-7-2014 | 2-7-2015 | 9756271 | 910776 | 10667047 | |
| 15 | 1/10/2012 | 10000000 | 102816 | 366 | 10.11 | 2-10-2013 | 3/10/2014 | 10962630 | 1111358 | 12073988 | ಕೆ.ಜಿ.ಬಿ ಬ್ಯಾಂಕ್ ಎಂ.ಜಿ ರೋಡ್ |
| 16 | 3-12-2012 | 10000000 | 291703 | 366 | 9.50 | 4-12-2013 | 5-12-2014 | 10952603 | 1087182 | 12039785 | ಸಿ.ಕೆ.ಜಿ.ಬಿ, ಎಂ.ಜಿ ರೋಡ್ |
| 17 | 11-01-2013 | 20000000 | 397835 | 365 | 9.50 | 11-1-2014 | 11-1-2015 | 21915167 | 2157291 | 24072458 | ಸಿ.ಕೆ.ಜಿ.ಬಿ, ಎಸ್.ಎಸ್ ಪುರಂ |
| 18 | 11-01-2013 | 20000000 | 67260239261 | 366 | 9.10 | 12-1-2014 | 13-1-2015 | 21888511 | 2066834 | 23955345 | ಎಸ್‌ಬಿಟಿ ಬ್ಯಾಂಕ್ |
| 19 | 11-01-2013 | 20000000 | 570348 | 365 | 9.10 | 11-1-2014 | 11-1-2015 | 21883055 | 2060350 | 23943405 | ವಿಜಯ ಬ್ಯಾಂಕ್ |
| 20 | 2-1-2013 | 79401 | 626996 | 365 | 9.00 | 2-1-2014 | 2-1-2015 | 86340 | 8037 | 94377 | ಎಸ್.ಬಿ.ಎಂ ಎಸ್ಎಂಇ ಶಾಖೆ. |
| 21 | 9-4-2013 | 46888 | 626719 | 365 | 9.00 | 9-4-2014 | 9-4-2015 | 50399 | 4669 | 55068 | |
| 22 | 2-5-2013 | 25000000 | 121878 | 365 | 9.55 | 7-5-2014 | 7-5-2015 | 27407348 | 2712638 | 30119986 | ಸಿ.ಕೆ.ಜಿ.ಬಿ, ಎಸ್.ಎಸ್ ಪುರಂ |
| 23 | 8-8-2013 | 50000000 | 332284 | 365 | 9.85 | 8-8-2013 | 8-8-2014 | 50000000 | 5109922 | 55109922 | ಏಸ್.ಬಿ.ಎಂ ಮುಖ್ಯ ಶಾಖೆ |
| 24 | 8-8-2013 | 20831798 | 332285 | 365 | 9.85 | 8-8-2013 | 8-8-2014 | 20831798 | 2128977 | 22960775 | ಏಸ್.ಬಿ.ಎಂ ಮುಖ್ಯ ಶಾಖೆ |
| 25 | 16-8-2013 | 50000000 | 332290 | 365 | 9.85 | 16-8-2013 | 16-8-2014 | 50000000 | 5109922 | 55109922 | ಏಸ್.ಬಿ.ಎಂ ಮುಖ್ಯ ಶಾಖೆ |
| 26 | 19-8-2013 | 10000000 | 345918 | 365 | 9.75 | 19-8-2013 | 19-8-2014 | 10000000 | 1011230 | 11011230 | ಸಿಕೆಜಿಬಿ ಎಸ್.ಎಸ್ ಪುರಂ |
| 27 | 17-8-2013 | 10000000 | 332292 | 365 | 9.85 | 17-8-2013 | 17-8-2014 | 10000000 | 1021984 | 11021984 | ಏಸ್.ಬಿ.ಎಂ ಮುಖ್ಯ ಶಾಖೆ |
| | **Total** | **372733795** | | | | | **Total** | **415499521** | **41180667** | **456680188** | |

ಭಾಗ –3

ಅನುಬಂಧ –5 ಕಂಡಿಕೆ – 12

# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

2013–14 ನೇ ಸಾಲಿನ ಜಮಾ ಹಾಗೂ ಖರ್ಚಿನ ವಿವರಗಳು

| ಕ್ರ. ಸಂ. | ಜಮಾ | ಮೊತ್ತ | ಕ್ರ. ಸಂ. | ಜಮಾ | ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಉ.ಖಾ. ಮೇಲಿನ ಬಡ್ಡಿ | 2263606 | 1 | ಸಿಬ್ಬಂದಿ ವೇತನ ಹಾಗೂ ಭತ್ಯೆಗಳು | 6890256 |
| 2 | ಪರಿಶೋಧನಾ ಶುಲ್ಕ | 2760416 | 2 | ಅಧ್ಯಕ್ಷರ ಗೌರವ ಧನ | 36614 |
| 3 | ಸಾಮಾನ್ಯ ರಶೀತಿಗಳು | 1920131 | 3 | ಸದಸ್ಯರ ಸಭಾ ಭತ್ಯೆ | 2240 |
| 4 | ಪಾರ್ಕ್ ಮತ್ತು ಸಿ.ಎ ವಿನಾಯ್ತಿ | 1862400 | 4 | ದೂರವಾಣಿ ವೆಚ್ಚ | 43276 |
| 5 | ಉತ್ತಮತೆ ಶುಲ್ಕ | 3096446 | 5 | ಸಾದಿಲ್ವಾರು ವೆಚ್ಚ | 629889 |
| 6 | ರಿಂಗ್ ರಸ್ತೆ ಸೆಸ್ | 4466490 | 6 | ಸಭಾ ವೆಚ್ಚ | 41507 |
| 7 | ಅಭಿವೃದ್ಧಿ ಶುಲ್ಕ | 5084436 | 7 | ಮುದ್ರಣ ವೆಚ್ಚ | 110422 |
| 8 | ಮೇಲ್ವಿಚಾರಣಾ ಶುಲ್ಕ | 5695450 | 8 | ಲೇಖನ ಸಾಮಗ್ರಿಗಳು | 111671 |
| 9 | ಖಾತೆ ಮತ್ತು ಪರವಾನಗಿ | 289284 | 9 | ಜಾಹಿರಾತು | 350265 |
| 10 | ಕಂದಾಯ | 555741 | 10 | ವಕೀಲರ ಸಂಭಾವನೆ | 563000 |
| 11 | ಮನೆ ಕಂದಾಯ | 28445 | 11 | ವಾಹನಗಳ ನಿರ್ವಹಣೆ ವೆಚ್ಚ | 650363 |
| 12 | ಕೆರೆ ಅಭಿವೃದ್ಧಿ ಶುಲ್ಕ | 12659000 | 12 | ಲೇ ಔಟ್ ಮಂಜೂರಾತಿಗಾಗಿ ಪಾವತಿಸಲಾಗಿದ್ದ ಹಣ ಮರು ಪಾವತಿ | 848850 |
| 13 | ಭಿಕ್ಷುಕರ ಕರ | 16288 | 13 | ಪ್ರಾರಂಭಿಕ ಠೇವಣಿ (ಸಿ.ಎ.ನಿವೇಶನ) ಹಿಂತಿರುಗಿಸಿರುವುದು | 74837 |
| 14 | ಮಾಹಿತಿ ಹಕ್ಕು ಅಧಿನಿಯಮ | 7240 | 14 | ನಿವೇಶನ ನೋಂದಣಿ ಶುಲ್ಕ | 4500 |
| 15 | ನೀರಿನ ಸಂಪರ್ಕ | 48750 | 15 | ಅಕ್ರಮ–ಸಕ್ರಮ | 1695732 |
| 16 | ತುಮಕೂರು ಅ.ಕೆರೆ ಪ್ರವೇಶ ಶುಲ್ಕ | 53890 | 16 | ರಜೆ ಮತ್ತು ನಿವೃತ್ತಿ ವೇತನದ ಅಚಿಶದಾನ | 863526 |
| 17 | ಸಿ.ಎ. ನಿವೇಶನ ಮಾರಾಟದ / ಗುತ್ತಿಗೆ ಮೊತ್ತ | 22975739 | 17 | ಸಭೆ ಸಮಾರಂಭ | 61389 |
| 18 | ಮೆಳೇಕೋಟೆ ವ.ಯೋ. ನಿವೇಶನ ಮಾರಾಟದಿಂದ | 341309 | 18 | ಭಿಕ್ಷುಕರ ಕರ ವಾಪಸ್ | 19086 |
| 19 | ಸ್ಲಂ ಸೆಸ್ | 509249 | 19 | ಅಂಚೆ ಚೀಟಿ | 20000 |
| 20 | ಲೇಬರ್ ಸೆಸ್ | 1456647 | 20 | ಕಂಪ್ಯೂಟರ್ ಹಾಗೂ ಯಂತ್ರೋಪಕರಣಗಳ ದುರಸ್ಥಿ | 108685 |
| 21 | ಪ್ರಾರಂಭಿಕ ಠೇವಣಿ ಹಿಂತಿರುಗಿಸಿರುವುದು/ಚೆಕ್ ರದ್ದುಪಡಿಸಿಕೊಂಡು ಜಮೆ ತೆಗೆದುಕೊಳ್ಳಲಾದ ಮೊತ್ತ | 6300 | 21 | ಕಛೇರಿ ಗಣಕೀಕರಣ – ಲೆಸ್‌ಪೇಪರ್ ಆಫೀಸ್ ಹಾಗೂ ಸಾಧನ ಸಲಕರಣೆ ಖರೀದಿ | 81532 |
| 22 | ಆಡಿಟ್ ಆಕ್ಷೇಪಣಾ ಮೊತ್ತ | 2699 | 22 | ಮೆಳೇಕೋಟೆ ವಸತಿ ಯೋಜನೆ ವಿದ್ಯುತ್, ಸಿವಿಲ್, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಮಗಾರಿಗಳು | 397059 |
| 23 | ಒಳಚರಂಡಿ ಕಾಮಗಾರಿ (ಸೆಪ್ಟಿಕ್ ಟ್ಯಾಂಕ್) | 633278 | | | |
| 24 | ಮೆಳೇಕೋಟೆ (ಶೆಟ್ಟಿಹಳ್ಳಿ, ಕ್ಯಾತ್ಸಂದ್ರ ) ಮೂಲೆ ನಿವೇಶನಗಳ ಮಾರಾಟದಿಂದ | 45055051 | 23 | ವರ್ತುಲ ರಸ್ತೆಯ ಹಾಳಾದ ಭಾಗದ ಡಾಂಬರೀಕರಣ ಅಭಿವೃದ್ಧಿ ಕಾಮಗಾರಿ. | 2660066 |
| 25 | ಮೆಳೇಕೋಟೆ, ಕ್ಯಾತ್ಸಂದ್ರ ವಸತಿ ಮೂಲೆ ನಿವೇಶನಗಳ ಬಡ್ಡಿ. | 281278 | | | |
| 26 | ಮೆಳೇಕೋಟೆ, ವಸತಿ ಯೋಜನೆಯ ನಿವೇಶನ ಗಳಿಂದ ಬಂದ ವಾಟರ್ ಆಗ್ಮಂಟೇಷನ್ ಚಾರ್ಜಸ್ (ಶೇ 5 %) | 1262345 | 24 | ಕ್ಯಾತ್ಸಂದ್ರ ವಸತಿ ಯೋಜನೆ ಸಿವಿಲ್ ಕಾಮಗಾರಿ | 3627118 |
| | | | 25 | ಎ) ಇತರೆ ಕಾಮಗಾರಿಗಳು/ಪಾರ್ಕ್ ಅಭಿವೃದ್ಧಿ/ ಪಾರ್ಕ್ ಪ್ರದೇಶದ ತಂತಿ ಬೇಲಿ ಹಾಕುವುದು. | 8923103 |
| 27 | ಶೆಟ್ಟಿಹಳ್ಳಿ ವಾಣಿಜ್ಯ ಮಳಿಗೆ ಮಾರಾಟದಿಂದ (ಹರಾಜು) | 9837 | | | |
| 28 | ಶೆಟ್ಟಿಹಳ್ಳಿ ವಾಣಿಜ್ಯ ಮಳಿಗೆಗಳ ಮಾಸಿಕ ಪ್ರೀಮಿಯಂ | 103000 | 26 | ಶೆಟ್ಟಿಹಳ್ಳಿ, ವೀರಸಾಗರ ಮತ್ತು ಕ್ಯಾತ್ಸಂದ್ರ ವಸತಿ ಬಡಾವಣೆಗಳಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ/ ಕಲಾ ಭವನ | 1320556 |
| 29 | ಬ್ಯಾಂಕ್ ಹೊಂದಾಣಿಕೆ | 226531 | | | |
| 30 | ಬ್ಯಾಂಕ್ ನಿಶ್ಚಿತ ಠೇವಣಿ ರದ್ದುಪಡಿಸಿಕೊಂಡು ಉಳಿತಾಯ ಖಾತೆಗೆ ಜಮೆ | 105119937 | 27 | ಮರಳೂರು ಖಾಸಗಿ ಬಡಾವಣೆ / ಕೈದಾಳ ಕ್ಷೇತ್ರದ ಸಮುದಾಯ ಭವನ | 1250000 |
| 31 | ಫಂಡ್ ವರ್ಗಾವಣೆ | 12500000 | 28 | ನಗರದಲ್ಲಿ ಅಭಿವೃದ್ಧಿಪಡಿಸಿರುವ ಉದ್ಯಾನವನಗಳ ವಾರ್ಷಿಕ ನಿರ್ವಹಣೆ. | 574881 |

| | | | | | |
|---|---|---|---|---|---|
| | | | 29 | ರಾಜ್ಯ ನಗರ ಯೋಜನಾ ಮಂಡಳಿಗೆ ವರ್ಗಾಯಿಸುವುದು ಉತ್ತ, ಮತೆ ಶುಲ್ಕ ಶೇಕಡ 5 ರಷ್ಟು | 623281 |
| | | | 30 | ತುಮಕೂರು ಅಮಾನಿಕೆರೆ ಅಭಿವೃದ್ದಿ ಉದ್ಯಾನವನಕ್ಕಾಗಿ ಬಾಬ್ತು | 9645841 |
| | | | 31 | ಅಮಾನಿಕೆರೆ ಉದ್ಯಾನವನಗಳ ನಿರ್ವಹಣೆ ಮತ್ತು ಇತರೆ ನಿರ್ವಹಣೆ ವೆಚ್ಚ | 2208868 |
| | | | 32 | ಪ್ರಾಧಿಕಾರದಿಂದ ಕೈಗೊಳ್ಳುವ ಇತರೆ ಸಾರ್ವಜನಿಕ ಕಾಮಗಾರಿಗಳು. | 1640160 |
| | | | 33 | (ತಂಗುದಾಣಗಳು / ಶೌಚಾಲಯಗಳು) | 581032 |
| | | | 34 | ವೀರಸೌಧ ಕಟ್ಟಡದ ವಾಣಿಜ್ಯ ಮಳಿಗೆ ಕಾಮಗಾರಿ | 95460 |
| | | | 35 | ಕೆರೆ ಅಭಿವೃದ್ಧಿ ನಂತರದ ಹೆಚ್ಚುವರಿ ಕಾಮಗಾರಿ | 74024 |
| | | | 36 | ಮೂಲೆ ನಿವೇಶನಗಳ ವಾಟರ್ ಆಗ್‌ಮೆಂಟೇಷನ್ ಚಾರ್ಜಸ್ ವಾಪಸ್ಸಾತಿ | 628453 |
| | | | 37 | ಬ್ಯಾಂಕ್ ಕಮೀಷನ್ | 4245 |
| | | | 38 | ಬ್ಯಾಂಕ್ ಹೊಂದಾಣಿಕೆ | 349683 |
| | | | 39 | ಫಂಡ್ ವರ್ಗಾವಣೆ | 12500000 |
| | | | 40 | ಠೇವಣಿಗಳ ಮರುಪಾವತಿ/ ಕಾಮಗಾರಿಗಳ ಇಎಂಡಿ & ಎಫ್‌ಎಸ್‌ಡಿ ವಾಪಸ್ಸಾತಿ | 1826613 |
| | | | 41 | ಶೆಟ್ಟಿಹಳ್ಳಿ ಎಲ್‌ಸಿ–40 ಅಂಡರ್‌ಪಾಸ್ ನಿರ್ಮಾಣಕ್ಕೆ ಪ್ರಾಧಿಕಾರದ ನಿಧಿಯಿಂದ ಮಾಡಲಾದ ವೆಚ್ಚ ಮೂಲೆ ನಿವೇಶನಗಳ ಹೆಚ್ಚುವರಿ | 999000 |
| | | | 42 | ಪಾವತಿ ಮೊತ್ತ ವಾಪಸ್ (ಮೆಳೇಕೋಟೆ– ವೀರಸಾಗರ/ ಕ್ಯಾತ್ಸಂದ್ರ) | 54953 |
| | | | 43 | ಮೆಳೇಕೋಟೆ– ವೀರಸಾಗರ ಮೂಲೆ ನಿವೇಶನಗಳಿಗಾಗಿ ಪಾವತಿಸಲಾಗಿದ್ದ ಮೊತ್ತ ವಾಪಸ್ | 240550 |
| | | | 44 | ತುಮಕೂರು ಅಮಾನಿಕೆರೆ ಗ್ಲಾಸ್ ಹೌಸ್ ನಿರ್ಮಾಣ | 300000 |
| | | | 45 | ವರ್ತುಲ ರಸ್ತೆಯ ಸಾಲ ಮರುಪಾವತಿ | 113758887 |
| | | | 46 | ನಿಶ್ಚಿತ ಠೇವಣಿ ಮಾಡಿರುವ ಮೊತ್ತ | 120000000 |
| | | | 47 | ನಿಶ್ಚಿತ ಠೇವಣಿಗಳ ಮೇಲಿನ ಟಿಡಿಎಸ್ ಕಡಿತ | 883832 |
| | **ಒಟ್ಟು** | **231291213** | | **ಒಟ್ಟು** | **298375305** |

| **ಘೋಷ್ವಾರೆ** | |
|---|---|
| **ಪ್ರಾರಂಭಿಕ ಶಿಲ್ಕು** | 85821669 |
| **ಆದಾಯಗಳು (+)** | 231291213 |
| **ಒಟ್ಟು** | **317112882** |
| **ಖರ್ಚು (–)** | 298375305 |
| **ಅಂತಿಮ ಶಿಲ್ಕು** | **18737577** |

**ಸಹಿ/–**
**ಆಯುಕ್ತರು**
**ನಗರಾಭಿವೃದ್ಧಿ ಪ್ರಾಧಿಕಾರ**

ಅನುಬಂಧ –6 ಭಾಗ –5 ಕಂಡಿಕೆ 16

## ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಯ ಬಾಕಿ ಪಟ್ಟಿ

| Sl. No. | Name and address of the allotee | Village | Sy No | Purpose | Lease Amount | Due | Period | Remarks |
|---|---|---|---|---|---|---|---|---|
| 1 | ತುಮಕೂರು ಜಿಲ್ಲಾ ಸಹಕಾರ ಯೂನಿಯನ್, ಗುಂಚಿ ಚೌಕ, ತುಮಕೂರು. | Chennadinne | 20 | ಶಿಕ್ಷಣ ಸಂಸ್ಥೆ | 502700 | 177161 | 16-08-2001<br>15-08-2031 | |
| 2 | ಅಧ್ಯಕ್ಷರು<br>St. Michaels Social Welfare Association (R.), No. 553, 14th Cross, Railway Parallel Road, R.P.C Layout, Bangalore - 560 040. | Shettihalli | 32/2a,<br>32/1a1b | ಶೈಕ್ಷಣಿಕ | 2464000 | 17600 | | Not yet Registred |
| 3 | ಸರ್ವೋದಯ ರೂರಲ್ ಅಂಡ್ ಏಜುಕೇಷನಲ್ ಡೆವಲಪ್‌ಮೆಂಟ್ ಸೊಸೈಟಿ, ತುಮಕೂರು | Sathyamangala | 43/3 | ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ | 2200000 | 903375 | 16-02-2012<br>15-02-2042 | |
| 4 | ಅಧ್ಯಕ್ಷರು, ಲಕ್ಷ್ಮೀ ವಿದ್ಯಾವರ್ಧಕ ಸಂಘ (ರಿ.) ಮುಡಬಿ ಗ್ರಾಮ, ಬಸವಕಲ್ಯಾಣ ತಾಲ್ಲೂಕು, ಬಾಗಲಕೋಟೆ ತಾಲ್ಲೂಕು | Antharasanahalli<br>Sathyamangala | 51/1,2,<br>50/2, 11/2,<br>16/1, 10/1B1B1 | ಶೈಕ್ಷಣಿಕ | 2229521 | 1436854 | 15-05-2013<br>14-05-2043 | Final |
| 5 | ಶಬರಿ ಮಹಿಳಾ ಪತ್ರಿನ ಸಹಕಾರ ಸಂಘ (ರಿ), ಟಿ.ಎ.ಪಿ.ಸಿ.ಎಂ.ಎಸ್.ಬಿಲ್ಡಿಂಗ್, ಗುಂಚಿಚೌಕ, ತುಮಕೂರು | Shettihalli | 75/1A4 | ಮಹಿಳಾ ಸಹಕಾರ ಬ್ಯಾಂಕ್ | 2229521 | 2117835 | | |
| 6 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಕ್ಯಾತ್ಸಂದ್ರ | Basavapatna | 1/2, 42/1 | ಗೋದಾಮು ಮತ್ತು ಸಂಘದ ಕಟ್ಟಡ ಕಟ್ಟಲು | 279900 | 182438 | 05-01-2013<br>04-01-2043 | |
| 7 | ಕಾರ್ಯದರ್ಶಿ, ತೋಂಟದ ಸಿದ್ದಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾ ಸಂಘ (ರಿ), ಎಡೆಯೂರು | Tumkur A Kere | 106, 107, 110 | ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಲು | 4745725 | 3682209 | | 60% |
| 8 | ಅಧ್ಯಕ್ಷರು, ಜಮೀಯಾ ಸೈದ್ನಂ ಅನಾಸ್ ಬಿನ್ ಮಲ್ಲಿಕ್ ಟ್ರಸ್ಟ್, ಗುಬ್ಬಿಗೇಟ್, ತುಮಕೂರು | Vakkodi | 85/7 | ಆರೋಗ್ಯ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯ | 500170 | 388082 | | Final |
| 9 | ಅಧ್ಯಕ್ಷರು, ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಆರ್‌ಟಿಓ ಕಛೇರಿ ಎದುರು, ಬಿಹೆಚ್ ರಸ್ತೆ, ತುಮಕೂರು. | Maralur | 17 | ವಿದ್ಯಾರ್ಥಿ ನಿಲಯ | 3070958 | 2379913 | | |
| | | | | | Total | 11285467 | | |

**ಕಂಡಿಕೆ 22**

**ಅನುಬಂಧ –7** ಭಾಗ –5

# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

2013–14 ನೇ ಸಾಲಿನ ಕಾಮಗಾರಿ ಶುಲ್ಕಗಳಲ್ಲಿ ರಾಜಧನ / ಮಾರಾಟ ತೆರಿಗೆ ಹಾಗೂ ಆದಾಯ ತೆರಿಗೆ ಕಟಾಯಿಸಬೇಕಾದ / ಕಟಾಯಿಸಿರುವ / ಜಮೆ ಮಾಡಿರುವ ಮೊತ್ತ

| ಕ್ರ. ಸಂ | ಕಾಮಗಾರಿಗಳ ಹೆಸರು | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಚೆಕ್ ನಂ ಹಾಗೂ ದಿನಾಂಕ | ಒಟ್ಟು ಬಿಲ್ ಮೊತ್ತ | ಪಾವತಿಯ ಮೊತ್ತ | ಕಟಾಯಿಸಿರುವ ಭದ್ರತಾ ಠೇವಣಿ | ಕಟಾಯಿಸಿರುವ ಗುತ್ತಿಗೆದಾರರ ಕ್ಷೇಮನಿಧಿ ಶೇ.0.1% | ಅಳತೆ ಪುಸ್ತಕದ ನಂ. ಹಾಗೂ ಪುಟ ಸಂಖ್ಯೆ | ರಾಜಧನ | | | | ಮಾರಾಟ ತೆರಿಗೆ | | | | ಆದಾಯ ತೆರಿಗೆ | | | | ಕಾರ್ಮಿಕರ ಕಟ್ಟಡ ನಿಧಿ | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | ಕಡಿತ ಮಾಡಬೇಕಾಗಿರುವುದು | ಕಡಿತ ಮಾಡಿರುವುದು | ಕಡಿಮೆ ಕಡಿತ ಮಾಡಿರುವುದು | ಜಮೆ ಮಾಡಿರುವುದು | ಕಡಿತ ಮಾಡಬೇಕಾಗಿರುವುದು | ಕಡಿತ ಮಾಡಿರುವುದು | ಕಡಿಮೆ ಕಡಿತ ಮಾಡಿರುವುದು | ಜಮೆ ಮಾಡಿರುವುದು | ಕಡಿತ ಮಾಡಬೇಕಾಗಿರುವುದು | ಕಡಿತ ಮಾಡಿರುವುದು | ಕಡಿಮೆ ಕಡಿತ ಮಾಡಿರುವುದು | ಜಮೆ ಮಾಡಿರುವುದು | ಕಡಿತ ಮಾಡಬೇಕಾಗಿರುವುದು | ಕಡಿತ ಮಾಡಿರುವುದು | ಕಡಿಮೆ ಕಡಿತ ಮಾಡಿರುವುದು | ಜಮೆ ಮಾಡಿರುವುದು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 |
| 1 | ಅಮಾನಿಕೆರೆ ಅಮಗ್ರ ಅಭಿವೃದ್ಧಿ 17 & ಪಾರ್ಟ್ | ಮೆ॥ ರೆಡ್ಡಿವೀರಣ್ಣ ಕನ್ಸ್‌ಟ್ರಕ್ಷನ್ಸ್ | 11.34 | 852009 01–03–2014 | 613338 | 429537 | 136620 | 613 | 766/45 | 8234 | 8234 | | | 24534 | 24534 | | | 7667 | 7667 | | | 6133 | 6133 | | |
| 2 | ಅಮಾನಿಕೆರೆ ಅಮಗ್ರ ಅಭಿವೃದ್ಧಿ 17 & ಪಾರ್ಟ್ | ಮೆ॥ ರೆಡ್ಡಿವೀರಣ್ಣ ಕನ್ಸ್‌ಟ್ರಕ್ಷನ್ಸ್ | 11.34 | 852015 18–03–2014 | 377322 | 353362 | 0 | 377 | 766/47 | | | | | 15093 | 15093 | | | 4717 | 4717 | | | 3773 | 3773 | | |
| | ಒಟ್ಟು | | | | | | 136620 | 990 | 8234 | 8234 | | | | **39627** | **39627** | | | **12384** | **12384** | | | **9906** | **9906** | | |

ಸಹಿ/–
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು

# ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಲೆಕ್ಕ ಪರಿಶೋಧನಾ ವರದಿ

## ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

| ಕ್ರ. ಸಂ. | ವರ್ಷವಾರು ಲೆಕ್ಕ ಪರಿಶೋಧನಾ ವರದಿ ಪೂರ್ಣಗೊಳಿಸಿ ಸಿದ್ಧಪಡಿಸಬೇಕಾದ ದಿನಾಂಕ | ವರ್ಷವಾರು ಲೆಕ್ಕ ಪರಿಶೋಧನಾ ವರದಿ ಸಿದ್ಧಪಡಿಸಿದ ದಿನಾಂಕ | ವಿಳಂಬಕ್ಕೆ ಕಾರಣಗಳು ಯಾವುದಾದರೂ ಕಾರಣಗಳು ಇದ್ದರೆ. | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಲೆಕ್ಕ ಪರಿಶೋಧನೆಯ ಪ್ರಮಾಣ ಪತ್ರವನ್ನು ನೀಡಿದ ಉಲ್ಲೇಖ ಮತ್ತು ದಿನಾಂಕ | ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಪಡೆದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ | ಶಾಸಕಾಂಗ ಸಭೆಯಲ್ಲಿ ಮಂಡಿಸಲು ವಿಳಂಬಕ್ಕೆ ಕಾರಣಗಳು | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | 2013–14 | 01–04–2014 | ಕಾಲಮಿತಿ ಯೊಳಗೆ ಸಲ್ಲಿಸಲಾಗಿದೆ. | ಸಂಖ್ಯೆ: ಟಿಯುಡಿಎ/ಎಸಿಟಿ/683 /566/ 2014–15, ದಿನಾಂಕ 04–07–2014, 18–06–2014, | ಪ್ರಾರಂಭಿಸಿದ ದಿನಾಂಕ 05–08–2014 ಮುಕ್ತಾಯಗೊಳಿಸಿದ ದಿನಾಂಕ 13–08–2014 | ಸಂಖ್ಯೆ:ಎಲ್ಎಸಿ/ ತುಮಕೂರು/ತುಲೆಪವ/ 2014–15 /1473–75, ದಿನಾಂಕ 28–11–2014, 1–12–2014 | ಅಚ್ಚಿಗೆ ಕಳುಹಿಸಿದ ದಿನಾಂಕ 04–12–2014 ವಾಪಸ್ ಪಡೆದ ದಿನಾಂಕ 06–12–2014 | ನಂ.ಟಿಯುಡಿಎ /ಎಸಿಟಿ/2014–15 ದಿನಾಂಕ 12–12–2014 | ಕಾಲಮಿತಿಯೊಳಗೆ ಸಲ್ಲಿಸಲಾಗಿದೆ. | |

ಸಹಿ/–
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು